# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **320** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಹೆಚ್. ಪಿ. ಸುಧಾಮ್ ದಾಸ್ (ನಾಮ ನಿರ್ದೇಶನ ಹೊಂದಿದವರು)** |
| **ಉತ್ತರಿಸುವ ದಿನಾಂಕ** | : | **13.08.2025** |
| **ಉತ್ತರಿಸುವ ಸಚಿವರು** | : | **ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸರ್ಕಾರದ ಮಹತ್ವಾಕಾಂಕ್ಷೆ ಕಾಯ್ದೆ SCSP TSP ಅಡಿಯಲ್ಲಿ ಪಶುಸಂಗೋಪನೆ ಇಲಾಖೆಯ 2021-22, 2022-23, 2023-24 ಹಾಗೂ 2024-25ರ ಹಣಕಾಸು ವರ್ಷಗಳಲ್ಲಿ ಬಿಡುಡೆಯಾಗಿರುವ ಅನುದಾನವೆಷ್ಟು;</td><td>ಸರ್ಕಾರದ ಮಹತ್ವಾಕಾಂಕ್ಷೆ ಕಾಯ್ದೆ SCSP-TSP ಅಡಿಯಲ್ಲಿ ಪಶುಸಂಗೋಪನೆ ಇಲಾಖೆಯ 2021-22, 2022-23, 2023-24 ಹಾಗೂ 2024-25ರ ಹಣಕಾಸು ವರ್ಷಗಳಲ್ಲಿ ಬಿಡುಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ.<br>
<table>
<tr><th colspan="4">(ರೂ.ಕೋಟಿಗಳಲ್ಲಿ)</th></tr>
<tr><th rowspan="2">ಕ್ರ. ಸಂ</th><th rowspan="2">ವರ್ಷ</th><th colspan="2">ಬಿಡುಗಡೆಯಾದ ಅನುದಾನ</th></tr>
<tr><th>ಎಸ್ ಸಿ ಎಸ್‌ಪಿ</th><th>ಟಿ ಎಸ್ ಪಿ</th></tr>
<tr><td>1.</td><td>2021-22</td><td>79.00</td><td>53.29</td></tr>
<tr><td>2.</td><td>2022-23</td><td>95.55</td><td>58.52</td></tr>
<tr><td>3.</td><td>2023-24</td><td>82.55</td><td>45.57</td></tr>
<tr><td>4.</td><td>2024-25</td><td>101.89</td><td>70.35</td></tr>
<tr><td></td><td>ಒಟ್ಟು</td><td>358.99</td><td>227.73</td></tr>
</table></td></tr>
<tr><td>ಆ)</td><td>ಸದರಿ ಸಾಲಿನ ಹಣಕಾಸು ವರ್ಷಗಳ ಅವಧಿಗಳಲ್ಲಿ ಪಶುಸಂಗೋಪನೆ ಇಲಾಖೆಗೆ ಬಿಡುಗಡೆಯಾಗಿರುವ SCSP TSP ಅನುದಾನಗಳನ್ನು ಯಾವ ಯಾವ ಯೋಜನೆಗಳ ಜಾರಿಗೆ ವ್ಯಯಿಸಲಾಗಿದೆ;</td><td>2021-22, 2022-23, 2023-24 ಹಾಗೂ 2024-25ರ ಹಣಕಾಸು ವರ್ಷಗಳ ಅವಧಿಗಳಲ್ಲಿ ಪಶುಸಂಗೋಪನೆ ಇಲಾಖೆಗೆ ಬಿಡುಗಡೆಯಾಗಿರುವ SCSP-TSP ಅನುದಾನಗಳನ್ನು ವ್ಯಯಿಸಲಾಗಿರುವ ಯೋಜನೆಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
</table>

...2

| | | |
|---|---|---|
| ಇ) | SCSP TSP ಕಾಯ್ದೆಯ ಸೆಕ್ಷನ್ 17ರ ಅನ್ವಯ ಪಶುಸಂಗೋಪನೆ ಇಲಾಖೆಯು 2021-2025ನೇ ಸಾಲಿನ ಹಣಕಾಸು ವರ್ಷಗಳ ಅವಧಿಗಳಲ್ಲಿ ಪರಿಶಿಷ್ಟ ಸಮುದಾಯ ಹಾಗೂ ಸಾಮಾನ್ಯ ಸಮುದಾಯದ ಅಭಿವೃದ್ಧಿ ಅಂತರವನ್ನು ಗುರುತಿಸಿ, ಸಂಬಂಧಿಸಿದ ಸಮುದಾಯ ಅಭಿವೃದ್ಧಿ ಅಭ್ಯಯಿಸಿ/ ಸಮಾಲೋಚಿಸಿ ತಯಾರಿಸಿರುವ ಅನುದಾನ ವಿನಿಯೋಗಗಳಿಗೆ ಸಂಬಂಧಿಸಿದ ಉಪಯೋಜನೆ ಕಾರ್ಯಯೋಜನೆಗಳಾವುವು; (ಪ್ರತಿಗಳನ್ನು ಒದಗಿಸುವುದು) | SCSP-TSP ಕಾಯ್ದೆಯ ಸೆಕ್ಷನ್ 17ರ ಅನ್ವಯ ಪಶುಸಂಗೋಪನೆ ಇಲಾಖೆಯು 2021-2025ನೇ ಸಾಲಿನ ಹಣಕಾಸು ವರ್ಷಗಳ ಅವಧಿಗಳಲ್ಲಿ ಪರಿಶಿಷ್ಟ ಸಮುದಾಯ ಹಾಗೂ ಸಾಮಾನ್ಯ ಸಮುದಾಯದ ಅಭಿವೃದ್ಧಿ ಅಂತರವನ್ನು ಗುರುತಿಸಿ, ಸಂಬಂಧಿಸಿದ ಸಮುದಾಯ ಅಭಿವೃದ್ಧಿ ಅಭ್ಯಯಿಸಿ/ ಸಮಾಲೋಚಿಸಿ ತಯಾರಿಸಿರುವ ಅನುದಾನ ವಿನಿಯೋಗಗಳಿಗೆ ಸಂಬಂಧಿಸಿದ ಉಪಯೋಜನೆ ಕಾರ್ಯಯೋಜನೆಗಳ ಮತ್ತು ಕ್ರಿಯಾ ಯೋಜನೆ ಆದೇಶಗಳ ಪ್ರತಿಗಳನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಈ) | SCSP TSP ಕಾಯ್ದೆಯ ಸೆಕ್ಷನ್ 15 ಹಾಗೂ 16 ರಡಿ ಕಡ್ಡಾಯ ಪಡಿಸಿರುವಂತೆ ಸದರಿ ಅನುದಾನದಡಿ ಬಿಡುಗಡೆಯಾಗಿರುವ ಹಣವನ್ನು ಕೇವಲ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ವ್ಯಕ್ತಿ, ಸದರಿ ಸಮುದಾಯ ವಾಸಿಸುತ್ತಿರುವ ಕಾಲೋನಿ/ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಬಳಸಲು ಖಾತ್ರಿಪಡಿಸಲು ಪಶು ಸಂಗೋಪನೆ ಇಲಾಖೆ ಕೈಗೊಂಡಿರುವ ಕ್ರಮಗಳಾವುವು? (ಸಂಬಂಧಿಸಿದ ದಾಖಲೆ ಒದಗಿಸುವುದು) | SCSP TSP ಕಾಯ್ದೆಯ ಸೆಕ್ಷನ್ 15 ಹಾಗೂ 16 ರಡಿ ಕಡ್ಡಾಯ ಪಡಿಸಿರುವಂತೆ ಸದರಿ ಅನುದಾನದಡಿ ಬಿಡುಗಡೆಯಾಗಿರುವ ಹಣವನ್ನು ಕೇವಲ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ವ್ಯಕ್ತಿ, ಸದರಿ ಸಮುದಾಯ ವಾಸಿಸುತ್ತಿರುವ ಕಾಲೋನಿ/ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಬಳಸಲು ಖಾತ್ರಿಪಡಿಸಲು ಪಶು ಸಂಗೋಪನೆ ಇಲಾಖೆಯು 2024-25ನೇ ಸಾಲಿನಲ್ಲಿ ಸಾಮಾನ್ಯ ಯೋಜನೆಗಳಲ್ಲಿ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಶೇ.17.15 ರಷ್ಟು ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.6.95 ರಷ್ಟು ಮೀಸಲಾತಿಯಂತೆ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆ ತಯಾರಿಸಿ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಅನುಷ್ಠಾನಾಧಿಕಾರಿಗಳು ಅವಶ್ಯಕತೆ ಇರುವ ದಾಖಲಾತಿ (ಜಾತಿ ಪ್ರಮಾಣ ಪತ್ರ, ಆಯ್ಕೆ ಸಮಿತಿಯಿಂದ ಆಯ್ಕೆಗೊಂಡ ಪಟ್ಟಿ)ಗಳನ್ನು ಪಡೆದು ಅನುಷ್ಠಾನ ಗೊಳಿಸಲಾಗುತ್ತಿದೆ.<br><br>2024-25ನೇ ಸಾಲಿನ ಕ್ರಿಯಾ ಯೋಜನೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ನೀಡಿದೆ. |

**ಪಸಂಮೀ 163 ಸಲೆವಿ 2025**

(signature)

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

## ಅನುಬಂಧ-1

**2021-22, 2022-23, 2023-24 ಹಾಗೂ 2024-25ರ ಹಣಕಾಸು ವರ್ಷಗಳ ಅವಧಿಗಳಲ್ಲಿ ಪಶು ಸಂಗೋಪನೆ ಇಲಾಖೆಗೆ ಬಿಡುಗಡೆಯಾಗಿರುವ SCSP TSP ಅನುದಾನಗಳನ್ನು ವ್ಯಯಿಸಲಾಗಿದೆ ಯೋಜನೆಗಳ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.**

**(ರೂ.ಕೋಟಿಗಳಲ್ಲಿ)**

| ಕ್ರ. ಸಂ | ಯೋಜನೆಗಳ ವಿವರಗಳು | ವೆಚ್ಚ ಮಾಡಲಾದ ಅನುದಾನ | |
|---|---|---|---|
| | 2021-22 | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ |
| 1 | ಪರಿಶಿಷ್ಟ ಜಾತಿಯ ಮತ್ತು ಪಂಗಡದ ರೈತರ ಜಾನುವಾರುಗಳ ಚಿಕಿತ್ಸೆಗಾಗಿ ಅವಶ್ಯವಿರುವ ಔಷಧಿ ಮತ್ತು ರಾಸಾಯನಿಕಗಳನ್ನು ಪೂರೈಸಲಾಗಿದೆ. | 1.71 | 1.26 |
| 2 | ಪರಿಶಿಷ್ಟ ಜಾತಿ ಮತು ಪಂಗಡದ ಫಲಾನುಭವಿಗಳಿಗೆ ವಿದ್ಯುತ್ ಚಾಲಿತ ಹಾಲು ಕರೆಯುವ ಯಂತ್ರಗಳ ಘಟಕ ವೆಚ್ಚದ ಶೇಕಡಾ 90% ರ ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ. | 1.06 | 0.72 |
| 3 | ಜಾನುವಾರುಗಳಿಗೆ ಗಳಲೇ ರೋಗ, ಕರುಳುಬೇನೆ, ರೇಬೀಸ್, ನೀಲಿ ನಾಲಿಗೆ ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಶ್ಯ ಲಸಿಕೆ / ಪರಿಕರಗಳನ್ನು ಮತ್ತು ಜಂತುನಾಶಕ ಔಷಧಿಗಳನ್ನು ಪೂರೈಸಲಾಗಿದೆ. | 0.59 | 0.47 |
| 4 | ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ 6+1 ಕುರಿ/ ಮೇಕೆ ಘಟಕಗಳನ್ನು ಒದಗಿಸುವುದು. ಘಟಕ ವೆಚ್ಚದ ಶೇಕಡಾ 90% ರ ಸಹಾಯಧನದಲ್ಲಿ ಒದಗಿಸಲಾಗಿದೆ. | 1.15 | 0.47 |
| 5 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ಜಾನುವಾರುಗಳಿಗೆ ವಿಮಾಯೋಜನೆ ಶೇ70%ರ ಸಹಾಯಧನದಲ್ಲಿ ಪ್ರೀಮಿಯಂ ಪಾವತಿಸಲಾಗಿದೆ. | 1.80 | 1.16 |
| 6 | ಪಶು ವೈದ್ಯಕೀಯ ವಿಶ್ವ ವಿದ್ಯಾಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಇ ಬಿ ಎಲ್ ವೆಚ್ಚ , ಪುಸ್ತಕ,ಲ್ಯಾಪ್ ಟಾಪ್ ಮತ್ತು ಪ್ರಾಕ್ಟಿಕಲ್ ಕಿಟ್ ಗಳನ್ನು ನೀಡಲು ಹಾಗೂ ಇತ್ಯಾದಿ ವೆಚ್ಚಗಳನ್ನು ಭರಿಸಲಾಗಿದೆ. | 1.30 | 0.66 |
| 7 | ಪರಿಶಿಷ್ಟ ಜಾತಿ ಮತ್ತು ಪಂಗಡದ ಹಾಲು ಉತ್ಪಾದಕರಿಗೆ ಗುಣಮಟ್ಟದ ಹಾಲಿನ ಸಂಗ್ರಹಣೆಗೆ ಉತ್ತೇಜನಕ್ಕಾಗಿ ಪ್ರತಿ ಲೀಟರ್ ಗೆ ರೂ.5/- ರಂತೆ ಪ್ರೋತ್ಸಾಹಧನ ಪಾವತಿಸಲಾಗಿದೆ. | 71.34 | 46.50 |
| | ಒಟ್ಟು: | **78.95** | **51.24** |

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರಗಳು | ವೆಚ್ಚ ಮಾಡಲಾದ ಅನುದಾನ | |
|---|---|---|---|
| | 2022-23 | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ |
| 1 | ಪರಿಶಿಷ್ಟ ಜಾತಿಯ ಮತ್ತು ಪಂಗಡದ ರೈತರ ಜಾನುವಾರುಗಳ ಚಿಕಿತ್ಸೆಗಾಗಿ ಅವಶ್ಯವಿರುವ ಔಷಧಿ ಮತ್ತು ರಾಸಾಯನಿಕಗಳನ್ನು ಪೂರೈಸಲಾಗಿದೆ. | 1.71 | 1.26 |
| 2 | ಪರಿಶಿಷ್ಟ ಜಾತಿ ಮತು ಪಂಗಡದ ಫಲಾನುಭವಿಗಳಿಗೆ ರಬ್ಬರ್ ನೆಲಹಾಸುಗಳನ್ನು ಘಟಕ ವೆಚ್ಚದ ಶೇಕಡಾ 90% ರ ಸಹಾಯಧನದಲ್ಲಿ ವಿತರಣೆ ಮಾಡಲಾಗಿದೆ. | 0.22 | 0.52 |
| 3 | ಜಾನುವಾರುಗಳಿಗೆ ಗಳಲೇ ರೋಗ, ಕರುಳುಬೇನೆ, ರೇಬೀಸ್, ನೀಲಿ ನಾಲಿಗೆ ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಶ್ಯ ಲಸಿಕೆ / ಪರಿಕರಗಳನ್ನು ಮತ್ತು ಜಂತುನಾಶಕ ಔಷಧಿಗಳನ್ನು ಪೂರೈಸಲಾಗಿದೆ. | 1.29 | 0.67 |
| 4 | ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ 6+1 ಕುರಿ/ ಮೇಕೆ ಘಟಕಗಳನ್ನು ಒದಗಿಸುವುದು. ಘಟಕ ವೆಚ್ಚದ ಶೇಕಡಾ 90% ರ ಸಹಾಯಧನದಲ್ಲಿ ಒದಗಿಸಲಾಗಿದೆ. | 1.03 | 0.42 |
| 5 | ಪಶು ವೈದ್ಯಕೀಯ ವಿಶ್ವ ವಿದ್ಯಾಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಇ ಬಿ ಎಲ್ ವೆಚ್ಚ , ಪುಸ್ತಕ,ಲ್ಯಾಪ್ ಟಾಪ್ ಮತ್ತು ಪ್ರಾಕ್ಟಿಕಲ್ ಕಿಟ್ ಗಳನ್ನು ನೀಡಲು ಹಾಗೂ ಇತ್ಯಾದಿ ವೆಚ್ಚಗಳನ್ನು ಭರಿಸಲಾಗಿದೆ. | 1.30 | 0.66 |
| 6 | ಪರಿಶಿಷ್ಟ ಜಾತಿ ಮತ್ತು ಪಂಗಡದ ಹಾಲು ಉತ್ಪಾದಕರಿಗೆ ಗುಣಮಟ್ಟದ ಹಾಲಿನ ಸಂಗ್ರಹಣೆಗೆ ಉತ್ತೇಜನಕ್ಕಾಗಿ ಪ್ರತಿ ಲೀಟರ್ ಗೆ ರೂ.5/- ರಂತೆ ಪ್ರೋತ್ಸಾಹಧನ ಪಾವತಿಸಲಾಗಿದೆ. | 89.59 | 48.93 |
| | **ಒಟ್ಟು:** | **95.14** | **52.46** |

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರಗಳು | ವೆಚ್ಚ ಮಾಡಲಾದ ಅನುದಾನ | |
|---|---|---|---|
| 2023-24 | | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ |
| 1 | ಪರಿಶಿಷ್ಟ ಜಾತಿಯ ಮತ್ತು ಪಂಗಡದ ರೈತರ ಜಾನುವಾರುಗಳ ಚಿಕಿತ್ಸೆಗಾಗಿ ಅವಶ್ಯವಿರುವ ಔಷಧಿ ಮತ್ತು ರಾಸಾಯನಿಕಗಳನ್ನು ಪೂರೈಸಲಾಗಿದೆ. | 2.18 | 0.89 |
| 2 | ಜಾನುವಾರುಗಳಿಗೆ ಗಳಲೇ ರೋಗ, ಕರುಳುಬೇನೆ, ರೇಬೀಸ್, ನೀಲಿ ನಾಲಿಗೆ ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಶ್ಯ ಲಸಿಕೆ / ಪರಿಕರಗಳನ್ನು ಮತ್ತು ಜಂತುನಾಶಕ ಔಷಧಿಗಳನ್ನು ಪೂರೈಸಲಾಗಿದೆ. | 5.92 | 3.17 |
| 3 | ತಾಂತ್ರಿಕ / ಅರೆ-ತಾಂತ್ರಿಕ ಸಿಬ್ಬಂದಿಗಳಿಗೆ ಮತ್ತು ರೈತರಿಗೆ ರೋಗೋದ್ರೋಕಗಳ ವಿರುದ್ಧ ಅರಿವು ಮೂಡಿಸುವ ಸಂಬಂಧ ತರಬೇತಿ ಕಾರ್ಯಕ್ರಮ ಮತ್ತು ಕಾರ್ಯಗಾರಗಳನ್ನು ನೀಡಲಾಗಿದೆ. | 0.04 | 0.02 |
| 4 | ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳ ಮುಖಾಂತರ ರೈತರ ಮನೆಬಾಗಲಿಗೆ ತುರ್ತು ಪಶುವೈದ್ಯ ಸೇವೆಯನ್ನು ಶುಲ್ಕ ರಹಿತ 1962 ಸಹಾಯವಾಣಿ ಮುಖಾಂತರ ಒದಗಿಸಲಾಗಿದೆ. | 8.15 | 4.15 |
| 5 | ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ 6+1 ಕುರಿ/ ಮೇಕೆ ಘಟಕಗಳನ್ನು ಒದಗಿಸುವುದು. ಘಟಕ ವೆಚ್ಚದ ಶೇಕಡಾ 90% ರ ಸಹಾಯಧನದಲ್ಲಿ ಒದಗಿಸಲಾಗಿದೆ. | 0.34 | 0.14 |
| 6 | ಪರಿಶಿಷ್ಟ ಜಾತಿ ಮತ್ತು ಪಂಗಡದ ಜಮೀನುವುಳ್ಳ ರೈತರಿಗೆ 05 ಕೆ.ಜಿ ಮೇವಿನ ಬೀಜಗಳ ಕಿರು ಪೊಟ್ಟಣಗಳನ್ನು ವಿತರಿಸಲಾಗಿದೆ. | 0.08 | 0.04 |
| 7 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ಜಾನುವಾರುಗಳಿಗೆ ವಿಮಾಯೋಜನೆ ಶೇ70%ರ ಸಹಾಯಧನದಲ್ಲಿ ಪ್ರೀಮಿಯಂ ಪಾವತಿಸಲಾಗಿದೆ. | 0.50 | 0.17 |
| 8 | ಪಶು ವೈದ್ಯಕೀಯ ವಿಶ್ವ ವಿದ್ಯಾಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಇ ಬಿ ಎಲ್ ವೆಚ್ಚ , ಪುಸ್ತಕ,ಲ್ಯಾಪ್ ಟಾಪ್ ಮತ್ತು ಪ್ರಾಕ್ಟಿಕಲ್ ಕಿಟ್ ಗಳನ್ನು ನೀಡಲು ಹಾಗೂ ಇತ್ಯಾದಿ ವೆಚ್ಚಗಳನ್ನು ಭರಿಸಲಾಗಿದೆ. | 1.23 | 0.50 |
| 9 | ಪರಿಶಿಷ್ಟ ಜಾತಿ ಮತ್ತು ಪಂಗಡದ ಹಾಲು ಉತ್ಪಾದಕರಿಗೆ ಗುಣಮಟ್ಟದ ಹಾಲಿನ ಸಂಗ್ರಹಣಗೆ ಉತ್ತೇಜನಕ್ಕಾಗಿ ಪ್ರತಿ ಲೀಟರ್ ಗೆ ರೂ.5/- ರಂತೆ ಪ್ರೋತ್ಸಾಹಧನ ಪಾವತಿಸಲಾಗಿದೆ. | 63.62 | 36.36 |
| | ಒಟ್ಟು: | **82.06** | **45.44** |

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರಗಳು | ವೆಚ್ಚ ಮಾಡಲಾದ ಅನುದಾನ | |
|---|---|---|---|
| | 2024-25 | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ |
| 1 | ಪರಿಶಿಷ್ಟ ಜಾತಿಯ ಮತ್ತು ಪಂಗಡದ ರೈತರ ಜಾನುವಾರುಗಳ ಚಿಕಿತ್ಸೆಗಾಗಿ ಅವಶ್ಯವಿರುವ ಔಷಧಿ ಮತ್ತು ರಾಸಾಯನಿಕಗಳನ್ನು ಪೂರೈಸಲಾಗಿದೆ. | 0.62 | 0.25 |
| 2 | 05 ವಾರದ 20 ನಾಟಿ ಕೋಳಿ ಮರಿಗಳನ್ನು ಉತ್ಪಾದಿಸಿ, ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತ ಮಹಿಳೆಯರಿಗೆ ಉಚಿತವಾಗಿ ವಿತರಿಸಿಲಾಗಿದೆ. | 0.28 | 3.00 |
| 3 | ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 10+1 ಕುರಿ/ ಮೇಕೆ ಘಟಕಗಳನ್ನು ಒದಗಿಸುವುದು. ಘಟಕ ವೆಚ್ಚದ ಶೇಕಡಾ 90% ರಷ್ಟನ್ನು ಸಹಾಯಧನವಾಗಿ ಹಾಗೂ ಉಳಿದ ಶೇ.10 ರಷ್ಟನ್ನು ಬ್ಯಾಂಕ್ ಸಾಲ ಅಥವಾ ಫಲಾನುಭವಿಗಳ ವಂತಿಕೆ ರೂಪದಲ್ಲಿ ಒದಗಿಸಲಾಗಿದೆ. | --- | 1.05 |
| 4 | ಜಾನುವಾರುಗಳಿಗೆ ಗಳಲೇ ರೋಗ, ಕರುಳುಬೇನೆ, ರೇಬೀಸ್, ನೀಲಿ ನಾಲಿಗೆ ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಶ್ಯ ಲಸಿಕೆ / ಪರಿಕರಗಳನ್ನು ಮತ್ತು ಜಂತುನಾಶಕ ಔಷಧಿಗಳನ್ನು ಪೂರೈಸಲಾಗಿದೆ. | 4.17 | 2.1 |
| 5 | ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳ ಮುಖಾಂತರ ರೈತರ ಮನೆಬಾಗಲಿಗೆ ತುರ್ತು ಪಶುವೈದ್ಯ ಸೇವೆಯನ್ನು ಶುಲ್ಕ ರಹಿತ 1962 ಸಹಾಯವಾಣಿ ಮುಖಾಂತರ ಒದಗಿಸಲಾಗಿದೆ. | 9.2 | 4.68 |
| 6 | ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ 20+1 ಕುರಿ/ಮೇಕೆ ಘಟಕಗಳನ್ನು ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಪಜಾ ಮತ್ತು ಪ.ಪಂ ಕುರಿಗಾಹಿ ಸದಸ್ಯರುಗಳಿಗೆ ನೀಡಲಾಗಿದೆ. | 3.71 | 1.51 |
| 7 | ಪರಿಶಿಷ್ಟ ಜಾತಿ ಮತ್ತು ಪಂಗಡದ ಜಮೀನುವುಳ್ಳ ರೈತರಿಗೆ 05 ಕೆ.ಜಿ ಮೇವಿನ ಬೀಜಗಳ ಕಿರು ಪೊಟ್ಟಣಗಳನ್ನು ವಿತರಿಸಲಾಗಿದೆ. | 1.05 | 0.42 |
| 8 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ಜಾನುವಾರುಗಳಿಗೆ ವಿಮಾಯೋಜನೆ ಶೇ70%ರ ಸಹಾಯಧನದಲ್ಲಿ ಪ್ರೀಮಿಯಂ ಪಾವತಿಸಲಾಗಿದೆ. | 0.37 | 0.15 |

| ಕ್ರ. ಸಂ | ಯೋಜನೆಗಳ ವಿವರಗಳು | ವೆಚ್ಚ ಮಾಡಲಾದ ಅನುದಾನ | |
|---|---|---|---|
| | 2024-25 | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ |
| 9 | ಪಶು ವೈದ್ಯಕೀಯ ವಿಶ್ವ ವಿದ್ಯಾಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಇ ಬಿ ಎಲ್ ವೆಚ್ಚ , ಪುಸ್ತಕ,ಲ್ಯಾಪ್ ಟಾಪ್ ಮತ್ತು ಪ್ರಾಕ್ಟಿಕಲ್ ಕಿಟ್ ಗಳನ್ನು ನೀಡಲು ಹಾಗೂ ಇತ್ಯಾದಿ ವೆಚ್ಚಗಳನ್ನು ಭರಿಸಲಾಗಿದೆ. | 0.26 | 0.10 |
| 10 | ಪರಿಶಿಷ್ಟ ಜಾತಿ ಮತ್ತು ಪಂಗಡದ ಹಾಲು ಉತ್ಪಾದಕರಿಗೆ ಗುಣಮಟ್ಟದ ಹಾಲಿನ ಸಂಗ್ರಹಣೆಗೆ ಉತ್ತೇಜನಕ್ಕಾಗಿ ಪ್ರತಿ ಲೀಟರ್ ಗೆ ರೂ.5/- ರಂತೆ ಪ್ರೋತ್ಸಾಹಧನ ಪಾವತಿಸಲಾಗಿದೆ. | 81.05 | 56.41 |
| | ಒಟ್ಟು: | 100.71 | 69.67 |

ನಿರ್ದೇಶಕರು
ಪಶುಪಾಲನಾ ಮತ್ತು ಪಶುವೈದ್ಯಕೀಯ
ಸೇವಾ ಇಲಾಖೆ, ಬೆಂಗಳೂರು.

ಕರ್ನಾಟಕ ಸರ್ಕಾರ

# ಪಶುಪಾಲನಾ ಇಲಾಖೆ ಕಾರ್ಯಕ್ರಮಗಳಲ್ಲಿ ಹಾಲು ಕರೆಯುವ ಯಂತ್ರ (Milk Machine)ಮತ್ತು ರಬ್ಬರ್ ನೆಲದ ಹಾಸುಗಳ (Rubber Cow Mat)ಪರಿಕರಗಳನ್ನು ವಿತರಿಸುವ ಅನುಷ್ಠಾನದ ಮಾರ್ಗಸೂಚಿಗಳು .

## ಆಯುಕ್ತರು
## ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
## ಬೆಂಗಳೂರು

ನಿರ್ದೇಶಕರು,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹೆಬ್ಬಾಳ, ಬೆಂಗಳೂರು-560 024

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಮಾರ್ಗ ಸೂಚಿಗಳು.

**1)ಯೋಜನಾ ಕಾರ್ಯಕ್ರಮಗಳು**

* ಪ್ರತಿ ಫಲಾನುಭವಿಗೆ ಒಂದು ವಿದ್ಯುತ್ ಚಾಲಿತ ಒಂದು ಬಕೆಟ್ ಸಾಮಾರ್ಥ್ಯದ ಹಾಲು ಕರೆಯುವ ಯಂತ್ರ ಮತ್ತು ಎರಡು ರಬ್ಬರ್ ನೆಲದ ಹಾಸುಗಳನ್ನು (Rubber cow mat) ನೀಡಲಾಗುವುದು

**2) ಘಟಕದ ವಿವರ.**

ಅ)ಒಂದು ಬಕೆಟ್ ಸಾಮಾರ್ಥ್ಯದ ವಿದ್ಯುತ್ ಚಾಲಿತ ಹಾಲು ಕರೆಯುವ ಯಂತ್ರ

ಆ) ಮಿಶ್ರ ತಳಿ ಹಸುಗಳಿಗೆ ಎರಡು ರಬ್ಬರ್ ನೆಲದ ಹಾಸುಗಳು (Rubber cow mat)

ಇ) ಕಾರ್ಯಾಕ್ರಮದಡಿ ಹೈನುಗಾರರಿಗೆ ಶೇಖಡ 90 ರ ಸಹಾಯಧನ ಮತ್ತು ಶೇಖಡ 10 ರ ಫಲಾನುಭವಿಯ ವಂತಿಗೆಯೊಂದಿಗೆ ಪರಿಶಿಷ್ಠ ಜಾತಿ, ಪರಿಶಿಷ್ಠ ಮತ್ತು ಪಂಗಡಗಳ ಪಲಾನುಭವಿಗಳಿಗೆ ನೀಡಲು ಉದ್ದೇಶಿಸಿದೆ.

ಈ ಸಂಬಂದ ಒಂದು ಬಕೆಟ್ ವಿದ್ಯುತ್ ಚಾಲಿತ ಹಾಲು ಕರೆಯುವ ಯಂತ್ರ ಮತ್ತು ರಬ್ಬರ್ ನೆಲದ ಹಾಸು (Rubber cow mat) ಗಳನ್ನು ಟೆಂಡರ್ ಮೂಲಕ ಖರೀದಿಸಲಾಗುವುದು.

| ಕ್ರ ಸಂ | ಘಟಕದ ವಿವರಗಳು | ಸಹಾಯ ಧನ | ಫಲಾನುಭವಿಯ ವಂತಿಕೆ |
|---|---|---|---|
| 01 | 02 | 04 | 05 |
| 01 | ಒಂದು ಬಕೆಟ್ ವಿದ್ಯುತ್ ಚಾಲಿತ ಹಾಲು ಕರೆಯುವ ಯಂತ್ರ (Singale Bucket milking machine) | ಸಹಾಯ ಧನ (ಶೇ 90% ) | ಫಲಾನುಭವಿಯ ವಂತಿಕೆ (ಶೇ 10%) |
| 02 | ಎರಡು ರಬ್ಬರ್ ನೆಲದ ಹಾಸುಗಳು (Rubber cow mat) | ಸಹಾಯ ಧನ (ಶೇ 90% ) | ಫಲಾನುಭವಿಯ ವಂತಿಕೆ (ಶೇ 10%) |

ಈ ಯೋಜನೆಯ ಜಿಲ್ಲಾವಾರು ಅರ್ಥಿಕ ಗುರಿಗಳನ್ನು ಅನುಬಂದ-1ರಲ್ಲಿ ಲಗತ್ತಿಸಿದೆ.

**2) ಯೋಜನೆಯ ಉದ್ದೇಶ**

1) ಮಿಶ್ರತಳಿ ರಾಸುಗಳಲ್ಲಿ ಕೆಚ್ಚಲು ಬಾವು ತಡೆಗಟ್ಟಲು ಮತ್ತು ಶುದ್ಧ ಹಾಲು ಉತ್ಪದಾನೆಗೆ ಸಹಕಾರಿಯಾಗಿರುತ್ತದೆ.

2) ಉತ್ಪಾದನಾ (ಕೂಲಿ) ವೆಚ್ಚ ಕಡಿಮೆಯಾಗುತ್ತದೆ.

3) ರಾಸುಗಳ ಕಾಲು ಗೊರಸು ಸವೆತ ಕಡಿಮೆಯಾಗುತ್ತದೆ.

4) ರಾಸುಗಳ ಗೆಣ್ಣು ಮತ್ತು ಕೀಲುಗಳ ಸವೆತ ಮತ್ತು ನೋವು ಕಡಿಮೆಯಾಗುತ್ತದೆ.

ಒಟ್ಟಾರೆ ಈ ಯೋಜನೆಯಿಂದ ರಾಸುಗಳ ಆರೋಗ್ಯ ಸುಧಾರಣೆಯಾಗಿ ಶುದ್ಧ ಹಾಲಿನ ಉತ್ಪಾದನೆಗೆ ಸಹಕಾರಿಯಾಗಿರುತ್ತದ

(---02---)

ನಿರ್ದೇಶಕರು,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹೆಬ್ಬಾಳ, ಬೆಂಗಳೂರು-560 024

## 3)ಯೋಜನಾ ವ್ಯಾಪ್ತಿ

ಅ)ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

ಆ)ಜಿಲ್ಲಾ ಉಪನಿರ್ದೇಶಕರು ತಾಲ್ಲೂಕು ಸಹಾಯಕ ನಿರ್ದೇಶಕರಿಗೆ ಗುರಿಗಳನ್ನುಜಿಲ್ಲಾ ವಿಧಾನ ಸಭಾ ಕ್ಷೇತ್ರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಸಾರವಾಗಿ ವಿಧಾನ ಸಭಾ ಕ್ಷೇತ್ರವಾರು/ತಾಲ್ಲೂಕುವಾರು ಹಂಚಿಕೆ ಮಾಡುವುದು.

## 4)ಅರ್ಹ ಫಲಾನುಭವಿಗಳು

1)ಫಲಾನುಭವಿಗಳು ಹೈನುಗಾರಿಕೆ ಯಲ್ಲಿ ಅನುಭವವುಳ್ಳವರಾಗಿರಬೇಕು

2)ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡುವ ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು, ಬಿ.ಪಿ.ಎಲ್.ಕಾರ್ಡ ಹೊಂದಿರಬೇಕು.

3)ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮದಂತೆ ಮಹಿಳೆಯರಿಗೆ 33% ರಷ್ಟುಹಾಗೂ ವಿಶೇಷ ಚೇತನರಿಗೆ ಕನಿಷ್ಠ ಶೇಕಡ 3 % ರಷ್ಟುಅಧ್ಯತೆ ನೀಡುವುದು

4) ಫಲಾನುಭವಿಯು ಹೈನುಗರಾರಗಿದ್ದು ಕನಿಷ್ಠ ಎರಡು ಮಿಶ್ರತಳಿ ರಾಸುಗಳನ್ನು ಹೊಂದಿರಬೇಕು,ಈ ರಾಸುಗಳಿಗೆ ಇನಾಫ್ ಕಿವಿಯೋಲೆ ಹಾಕಿರಬೇಕು ಇದಕ್ಕೆ ಸ್ಥಳಿಯ ಪಶುವೈದ್ಯರಿಂದ ಧೃಡೀಕರಣ ಪತ್ರ ಪಡೆದಿರಬೇಕು.

## 5) ಫಲಾನುಭವಿಯ ಆಯ್ಕೆ

ವಿಧಾನ ಸಭಾ ಕ್ಷೆತ್ರದ ವ್ಯಾಪ್ತಿಯಲ್ಲಿ ಫಲಾನುಭವಿಗಳಿಂದ ಅರ್ಜಿ ಪಡೆದು ಆಯ್ಕೆ ಸಮಿತಿ ಮೂಲಕ ನಿಗದಿತ ಸಮಯದಲ್ಲಿಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು.

### ಆಯ್ಕೆಸಮಿತಿ

| | | |
|---|---|---|
| 1 | ವಿಧಾನ ಸಭಾ ಕ್ಷೇತ್ರದ ಶಾಸಕರು | ಅಧ್ಯಕ್ಷರು |
| 2 | ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಯಂ ಅಗಿ ವಾಸಿಸುತ್ತಿರುವ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 3 | ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ | ಸದಸ್ಯರು |
| 4 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು | ಸದಸ್ಯರು |
| 5 | ತಾಲ್ಲೂಕು ಸಹಾಯಕನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿ, ಪಶುಪಾಲನಾ ಇಲಾಖೆ, | ಸದಸ್ಯ ಕಾರ್ಯದರ್ಶಿ |

### ಸಮಿತಿಯ ಕಾರ್ಯ ವ್ಯಾಪ್ತಿ

ಅ)ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಫಲಾನುಭವಿಗಳನ್ನು ನಿಗಧಿತ ಸಮಯದಲ್ಲಿ ಗುರಿಗಳನ್ವಯ ಆಯ್ಕೆ ಮಾಡುವುದು. ಈ ಕಾರ್ಯಕ್ರಮವು ಯಶಸ್ವಿಯಾಗಿ ಕಾರ್ಯಗತವಾಗಲು ಸಲಹೆ ನೀಡುವುದು.

ಆ)ಯೋಜನೆಯಲ್ಲಿ ಲೋಪ ದೋಷಗಳು ಕಂಡು ಬಂದಲ್ಲಿ ಅಂತಹುಗಳನ್ನು ನಿವಾರಿಸಲು ಸಲಹೆ ನೀಡುವುದು.

ಇ) ಫಲಾನುಭವಿಯು ನಿರಾಸಕ್ತಿ ಮತ್ತು ಇನ್ನಿತರೆ ಕಾರಣಗಳಿಂದ ಅನುಧಾನ ಬಳಕೆಯಾಗದ ಸಂಧರ್ಭದಲ್ಲಿ ಅನುಧಾನಕ್ಕೆ.ಅನುಗುಣವಾಗಿ ಬೇರೆ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

ನಿರ್ದೇಶಕರು
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹೆಬ್ಬಾಳ, ಬೆಂಗಳೂರು-560 024


(---03---)

## 6.ಯೋಜನಾ ಅನುಷ್ಠಾನ ವಿಧಾನ

1) ರಾಜ್ಯ ಮಟ್ಟದಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಗುರಿಗಳನ್ನು ನಿಗಧಿಪಡಿಸಲಾಗುವುದು.

2) ಜಿಲ್ಲಾಉಪನಿರ್ದೇಶಕರುಗಳು ವಿಧಾನ ಸಭಾ ಕ್ಷೇತ್ರವಾರು/ತಾಲ್ಲೂಕುವಾರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಗುರಿಗಳನ್ನು ಮರು ನಿಗಧಿಪಡಿಸಬೇಕು.

3) ಜಿಲ್ಲೆಯ ಉಪನಿರ್ದೇಶಕರು ಯೋಜನೆಗಾಗಿ ನಿಗದಿಪಡಿಸಲಾದ ಗುರಿಗಳ ಅನ್ವಯ ಸಹಾಯಕ ನಿರ್ದೇಶಕರಿಗೆ ಮರು ನಿಗದಿ ಪಡಿಸುವುದು .

4)ಸಹಾಯಕ ನಿರ್ದೇಶಕರು ನಿಗದಿಪಡಿಸಿದ ಗುರಿಗಳನ್ವಯ ಅರ್ಜಿಗಳನ್ನು ಆಹ್ವಾನಿಸಿ ನಿಗಧಿತ ಸಮಯದೊಳಗೆ ಬಂದ ಅರ್ಜಿಗಳನ್ನು ಆಯ್ಕೆ ಸಮಿತಿ ಸಭೆಗೆ ಮಂಡಿಸಿ ಆಯ್ಕೆ ಅನುಮೋದಿತ ಫಲಾನುಭವಿಗಳ ಪಟ್ಟಿ ತಯಾರಿಸುವುದು.

5) ಸಹಾಯಕ ನಿರ್ದೇಶಕರು ಆಯ್ಕೆಯಾದ ಪಲಾನುಭವಿಗಳ ವಂತಿಗೆ ಹಣವನ್ನು (ಶೇ 10 %) ಸಂಬಂದಿಸಿದ ಉಪನಿರ್ದೇಶಕ (ಆಡಳಿತ)ರವರಿಗೆ ಡಿ.ಡಿ ಮೂಲಕ ನೀಡುವುದು.

6 )ಸಂಬಂದಿಸಿದ ಎಲ್ಲಾ ಉಪನಿರ್ದೇಶಕ(ಆಡಳಿತ)ರವರುಗಳು ವಂತಿಗೆ ಹಣವನ್ನು ಡಿ.ಡಿ ರೂಪದಲ್ಲಿ ಕೇಂದ್ರ ಕಛೇರಿಗೆ ನೀಡುವುದು.

7) ಕೇಂದ್ರ ಕಛೇರಿಯಲ್ಲಿ ಟೆಂಡರ್ ಮೂಲಕ ಪರಿಕರಗಳನ್ನು ನಿಯಮಾನುಸಾರ ಖರೀದಿಸಲು ಕ್ರಮವಹಿಸಿ ತಾಲ್ಲೂಕುಗಳಿಗೆ ವಿತರಣೆ ಮಾಡಲು ವ್ಯವಸ್ಥೆಗೊಳಿಸುವುದು.

8)ಈ ಯೋಜನೆಯ ವಿವರಗಳನ್ನು ಪಶು ಭಾಗ್ಯ ಹಾಪ್ ನಲ್ಲಿ ನಮೂದಿಸಲು ಸೂಚಿಸಿದೆ.

9) ಯೋಜನೆ ಅನುಷ್ಠಾನದ ಪ್ರಗತಿ ವಿವರಗಳನ್ನು ಆಯುಕ್ತಾಲಯದ ಅಭಿವೃದ್ಧಿ ಶಾಖೆಗೆ ನೀಡುವುದು.

## 7) ಯೋಜನಾ ಅನುಷ್ಠಾನಾಧಿಕಾರಿಗಳು

1)ತಾಲ್ಲೂಕು ಸಹಾಯಕನಿರ್ದೇಶಕರು/ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಯೋಜನಾ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ.ಎಲ್ಲಾ ಬಗೆಯ ದಾಖಲೆ ಪತ್ರಗಳನ್ನು ನಿರ್ವಹಿಸುವುದು ಇವರ ಜವಾಬ್ದಾರಿಯಾಗಿರುತ್ತದೆ.

## 8)ದಾಖಲೆಗಳ ವಿವರ

1) ಫಲಾನುಭವಿ ಆಯ್ಕೆಯಾಗಿರುವ ಬಗ್ಗೆ ಸಮಿತಿಯಿಂದ ಅನುಮೋದಿಸಿದ ಪಟ್ಟಿ

2)ಫಲಾನುಭವಿಯ ಜಾತಿ ಪ್ರಮಾಣ ಪತ್ರ.

3) ಫಲಾನುಭವಿಯ **ಫ್ರೂಟ್ಸ್ ಐ ಡಿ (Fruit ID)**ಪ್ರಮಾಣ ಪತ್ರ

4)ಫಲಾನುಭವಿಯ ಇತ್ತೀಚಿನ ಎರಡು ಭಾವಚಿತ್ರ

6)ಫಲಾನುಭವಿಯಿಂದ ಪರಿಕರ ಸ್ವೀಕೃತಿ ಪ್ರಮಾಣ ಪತ್ರವನ್ನು ಪಡೆಯಬೇಕು.



ನಿರ್ದೇಶಕರು,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹೆಬ್ಬಾಳ, ಬೆಂಗಳೂರು-560 024

(----04---)

## 9)ಸ್ವತ್ತು ಖರೀದಿ ಸಮಿತಿ

ಅಭಿವೃದ್ಧಿ ಶಾಖೆ, ಆಯುಕ್ತಾಲಯ ಬೆಂಗಳೂರು ಇವರು ಟೆಂಡರ್ ಮೂಲಕ ನಿಯಮಾನುಸಾರ ಖರೀದಿಸಿ ಮತ್ತು ಹಂಚಿಕೆ ಮಾಡಲಾಗುವುದು.

## 10)ಯೋಜನೆ ಮೇಲ್ವಿಚಾರಣೆ

1)ಸಂಬಂದಿಸಿದ ಕ್ಷೇತ್ರ ವ್ಯಾಪ್ತಿಯ ಪಶುವೈದ್ಯಾಧಿಕಾರಿಗಳು ಮೂಲ ದಾಖಲೆ ಪತ್ರಗಳನ್ನು ಸಹಾಯಕನಿರ್ದೇಶಕರು/ಮುಖ್ಯಪಶುವೈದ್ಯಾಧಿಕಾರಿಗಳು (ಆಡಳಿತ) ರವರಿಗೆ ಸಲ್ಲಿಸುವುದು. ಮತ್ತು ಜೆರಾಕ್ಸ್ ಪ್ರತಿಗಳನ್ನು ತಮ್ಮ ಕಛೇರಿಯಲ್ಲಿ ನಿರ್ವಹಣೆ ಮಾಡುವುದು.

2) ಇಲಾಖಾ ಯೋಜನೆಯಡಿಯಲ್ಲಿ ನೀಡಿದ ಸ್ವತ್ತುಗಳ ಅನುಸರಣೆ ಮಾಡಿ ಕಾಲಕಾಲಕ್ಕೆ ಮಾಹಿತಿ ನೀಡುವುದು. ಮತ್ತು ವಿತರಿಸಿದ ಸ್ವತ್ತುಗಳ ಅನುಪಾಲನಾ ವಹಿ (Asset Register) ನಿರ್ವಹಿಸುವುದು.

3) ಉಪ ನಿರ್ದೇಶಕರುಗಳು ಯೋಜನೆ ಅನುಷ್ಠಾನದ ಬಗ್ಗೆ ಹಾಗೂ ಯೋಜನೆ ಅನುಸರಣೆ /ಪ್ರಗತಿ ಬಗ್ಗೆ ಕಾಲ-ಕಾಲಕ್ಕೆ ಆಯುಕ್ತಾಲಯಕ್ಕೆ ವರದಿ ಸಲ್ಲಿಸುವುದು

ಆಯುಕ್ತರು
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಬೆಂಗಳೂರು

ನಿರ್ದೇಶಕರು,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

# ಕರ್ನಾಟಕಸರ್ಕಾರ

ಪಶುಪಾಲನಾಇಲಾಖೆಯ2022-23 ನೇ ಸಾಲಿನ
ಅನುಸೂಚಿತಜಾತಿಗಳಉಪಯೋಜನೆ ಮತ್ತು ಬುಡಕಟ್ಟುಉಪಯೋಜನೆ
ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತದಡಿಯಲ್ಲಿ

## ವಿಶೇಷಘಟಕಯೋಜನೆ ಮತ್ತು ಗಿರಿಜನಉಪಯೋಜನೆ ಕಾರ್ಯಕ್ರಮಗಳಡಿಯಲ್ಲಿ ರಬ್ಬರ್ ನೆಲದ ಹಾಸುಗಳ(Rubber Cow Mat)ಪರಿಕರಗಳನ್ನುಫಲಾನುಭವಿಗಳಿಗೆವಿತರಿಸುವ ಕಾರ್ಯಕ್ರಮ

ಅನುಷ್ಠಾನದ ಮಾರ್ಗಸೂಚಿಗಳು.

## ಆಯುಕ್ತರು

## ಪಶುಪಾಲನಾಮತ್ತುಪಶುವೈದ್ಯಸೇವಾಇಲಾಖೆ

## ಬೆಂಗಳೂರು

**ವಿಶೇಷಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಮಾರ್ಗಸೂಚಿಗಳು.**

1)ಯೋಜನಾಕಾರ್ಯಕ್ರಮಗಳು

ಪ್ರತಿಫಲಾನುಭವಿ ಎರಡು ರಬ್ಬರ್ ನೆಲದ ಹಾಸುಗಳನ್ನು (Rubber cow mat) ನೀಡಲಾಗುವುದು.

2) ಘಟಕದವಿವರ

ಅ) ಮಿಶ್ರತಳಿ ಹಸುಗಳಿಗೆ ಎರಡು ರಬ್ಬರ್ ನೆಲದ ಹಾಸುಗಳು(Rubber cow mat)

ಇ)ಈ ಘಟಕಗಳನ್ನು ಹೈನುಗಾರರಿಗೆ ಶೇಖಡ. 90ರ ಸಹಾಯಧನ ಮತ್ತು ಶೇಖಡ.10ರ ಫಲಾನುಭವಿಯವಂತಿಗೆಯೊಂದಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ನೀಡಲು ಉದ್ದೇಶಿಸಿದೆ

ಈ ಸಂಬಂದ ರಬ್ಬರ್ ನೆಲದ ಹಾಸು(Rubber cow mat) ಗಳನ್ನು ಟೆಂಡರ್ ಮೂಲಕಖರೀದಿಸಲಾಗುವುದು

| ಕ್ರಸಂ | ಘಟಕದವಿವರಗಳು | ಸಹಾಯಧನ ಶೇಖಡ | ಫಲಾನುಭವಿಯವಂತಿಕೆ |
|---|---|---|---|
| 01 | ಎರಡು ರಬ್ಬರ್ ನೆಲದ ಹಾಸುಗಳು (Rubber cow mat) | 90% | 10% |

ಈ ಯೋಜನೆಯ ಜಿಲ್ಲಾವಾರು ಆರ್ಥಿಕ ಗುರಿಗಳನ್ನು ಅನುಬಂಧ 1ರಲ್ಲಿ ಲಗತ್ತಿಸಿದೆ.

ಯೋಜನೆಯ ಉದ್ದೇಶ

1) ಮಿಶ್ರತಳಿ ಹಸುಗಳಲ್ಲಿ ಕೆಚ್ಚಲುಬಾವು ತಡೆಗಟ್ಟಲು ಮತ್ತು ಶುದ್ಧಹಾಲು ಉತ್ಪಾದನೆಗೆ ಸಹಕಾರಿಯಾಗುತ್ತದೆ.
2) ಉತ್ಪಾದನಾ (ಕೂಲಿ) ವೆಚ್ಚಕಡಿಮೆಯಾಗುತ್ತದೆ.
3) ರಾಸುಗಳ ಕಾಲುಗೊರಸುಸವೆತಕಡಿಮೆಯಾಗುತ್ತದೆ.
4) ರಾಸುಗಳ ಗೆಣ್ಣು ಮತ್ತು ಕೀಲುಗಳ ಸವೆತ ಮತ್ತು ನೋವು ಕಡಿಮೆಯಾಗುತ್ತದೆ.

ಒಟ್ಟಾರೆ ಈ ಯೋಜನೆಯಿಂದರಾಸುಗಳಆರೋಗ್ಯ ಸುಧಾರಣೆಯಾಗಿ ಶುದ್ಧ ಹಾಲಿನ ಉತ್ಪಾದನೆಗೆಸಹಕಾರಿಯಾಗಿರುತ್ತದೆ.

3)ಯೋಜನಾವ್ಯಾಪ್ತಿ

ಅ) ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುವುದು.
ಆ) ಜಿಲ್ಲಾ ಉಪನಿರ್ದೇಶಕರು ತಾಲ್ಲೂಕು ಸಹಾಯಕನಿರ್ದೇಶಕರಿಗೆ ಗುರಿಗಳನ್ನು ಜಿಲ್ಲಾ ವಿಧಾನಸಭಾಕ್ಷೇತ್ರದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಗಳ ಜನಸಂಖ್ಯೆಗೆ ಅನುಸಾರವಾಗಿ ವಿಧಾನಸಭಾಕ್ಷೇತ್ರವಾರು/ತಾಲ್ಲೂಕುವಾರು ಹಂಚಿಕೆಮಾಡುವುದು.

**4)ಅರ್ಹಫಲಾನುಭವಿಗಳು**

1)ಫಲಾನುಭವಿಗಳು ಹೈನುಗಾರಿಕೆಯಲ್ಲಿ ಅನುಭವವುಳ್ಳವರಾಗಿರಬೇಕು
2)ಪರಿಶಿಷ್ಟಜಾತಿಮತ್ತುಪರಿಶಿಷ್ಟಪಂಗಡದ ಜಾತಿಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು.
3)ಸದರಿಕಾರ್ಯಕ್ರಮದಲ್ಲಿ ಸರ್ಕಾರದನಿಯಮದಂತೆ ಮಹಿಳೆಯರಿಗೆ ಶೇಖಡ33% ರಷ್ಟುಹಾಗೂ ವಿಶೇಷಚೇತನರಿಗೆ ಕನಿಷ್ಠ ಶೇಖಡ 5 % ರಷ್ಟು ಆದ್ಯತೆ ನೀಡುವುದು

4) ಫಲಾನುಭವಿಯು ಹೈನುಗಾರಾರಗಿದ್ದು ಕನಿಷ್ಠ ಎರಡು ಮಿಶ್ರತಳಿ ರಾಸುಗಳನ್ನು ಹೊಂದಿರಬೇಕು, ಈ ರಾಸುಗಳಿಗೆ ಇನಾಫ್ ಕಿವಿಯೋಲೆ ಹಾಕಿರಬೇಕು. ಇದಕ್ಕೆ ಸ್ಥಳಿಯ ಪಶುವೈದ್ಯರಿಂದ ಧೃಡೀಕರಣಪತ್ರ ಪಡದಿರಬೇಕು.

5) ಫಲಾನುಭವಿಯಆಯ್ಕೆ

ವಿಧಾನಸಭಾಕ್ಷೆತ್ರದವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರ ನೀಡಿ ಅರ್ಹಫಲಾನುಭವಿಗಳಿಂದ ಅರ್ಜಿ ಪಡೆದು ಆಯ್ಕೆಸಮಿತಿ ಮೂಲಕ ನಿಗದಿತ ಸಮಯದಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆಮಾಡಬೇಕು.

ಆಯ್ಕೆಸಮಿತಿ

| | | |
|---|---|---|
| 1 | ವಿಧಾನಸಭಾಕ್ಷೇತ್ರದಶಾಸಕರು | ಅಧ್ಯಕ್ಷರು |
| 2 | ವಿಧಾನಸಭಾಕ್ಷೇತ್ರದವ್ಯಾಪ್ತಿಯಲ್ಲಿಖಾಯಂಅಗಿವಾಸಿಸುತ್ತಿರುವವಿಧಾನಪರಿಷತ್ ಸದಸ್ಯರು | ಸದಸ್ಯರು |
| 3 | ತಾಲ್ಲೂಕುಪಂಚಾಯಿತಿಕಾರ್ಯನಿರ್ವಹಣಾಧಿಕಾರಿ | ಸದಸ್ಯರು |
| 4 | ತಾಲ್ಲೂಕುಸಮಾಜಕಲ್ಯಾಣಾಧಿಕಾರಿಗಳು | ಸದಸ್ಯರು |
| 5 | ತಾಲ್ಲೂಕುಸಹಾಯಕನಿರ್ದೇಶಕರು /ಮುಖ್ಯಪಶುವೈದ್ಯಾಧಿಕಾರಿ,ಪಶುಪಾಲನಾಇಲಾಖೆ. | ಸದಸ್ಯಕಾರ್ಯದರ್ಶಿ |

ಸಮಿತಿಯಕಾರ್ಯವ್ಯಾಪ್ತಿ

ಅ)ವಿಶೇಷಘಟಕಯೋಜನೆ ಮತ್ತು ಗಿರಿಜನಉಪಯೋಜನೆ ಫಲಾನುಭವಿಗಳನ್ನು ನಿಗಧಿತ ಸಮಯದಲ್ಲಿ ಗುರಿಗಳನ್ವಯ ಆಯ್ಕೆಮಾಡುವುದು. ಈ ಕಾರ್ಯಕ್ರಮವು ಯಶಸ್ವಿಯಾಗಿ ಕಾರ್ಯಗತವಾಗಲು ಸಲಹೆನೀಡುವುದು.
ಆ)ಯೋಜನೆಯಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಅಂತಹುಗಳನ್ನು ನಿವಾರಿಸಲು ಸಲಹೆ ನೀಡುವುದು.

ಇ) ಫಲಾನುಭವಿಯು ನಿರಾಸಕ್ತಿ ಮತ್ತು ಇನ್ನಿತರೆ ಕಾರಣಗಳಿಂದ ಅನುಧಾನ ಬಳಕೆಯಾಗದ ಸಂದರ್ಭದಲ್ಲಿ ಅನುಧಾನಕ್ಕೆ ಅನುಗುಣವಾಗಿ ಬೇರೆ ಫಲಾನುಭವಿಗಳನ್ನು ಆಯ್ಕೆಮಾಡುವುದು

## 6.ಯೋಜನಾ ಅನುಷ್ಠಾನವಿಧಾನ

1)ರಾಜ್ಯಮಟ್ಟದಲ್ಲಿಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಗುರಿಗಳನ್ನು ನಿಗಧಿಪಡಿಸಲಾಗುವುದು.

2) ಜಿಲ್ಲಾಉಪನಿರ್ದೇಶಕರುಗಳು ವಿಧಾನಸಭಾಕ್ಷೇತ್ರವಾರು/ತಾಲ್ಲೂಕುವಾರು ಪರಿಶಿಷ್ಟ ಜಾತಿ ಮತ್ತುಪರಿಶಿಷ್ಟಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಗುರಿಗಳನ್ನು ಮರು ನಿಗಧಿಪಡಿಸಬೇಕು.

3)ಸಹಾಯಕನಿರ್ದೇಶಕರು ನಿಗದಿಪಡಿಸಿದ ಗುರಿಗಳನ್ವಯ ಅರ್ಜಿಗಳನ್ನು ಆಹ್ವಾನಿಸಿ ನಿಗಧಿತ ಸಮಯದೊಳಗೆ ಬಂದ ಅರ್ಜಿಗಳನ್ನು ಆಯ್ಕೆಸಮಿತಿ ಸಭೆಗೆ ಮಂಡಿಸಿ ಆಯ್ಕೆ ಅನುಮೋದಿತ ಫಲಾನುಭವಿಗಳ ಪಟ್ಟಿ ತಯಾರಿಸುವುದು.

4) ಸಹಾಯಕನಿರ್ದೇಶಕರು ಆಯ್ಕೆಯಾದ ಫಲಾನುಭವಿಗಳವಂತಿಗೆ ಹಣವನ್ನು (ಶೇ 10 %)

ಧರಗುತ್ತಿಗೆ ಹೊಂದಿ ಪರಿಕರಗಳನ್ನು ಸರಬರಾಜು ಮಾಡುವ ಸಂಸ್ಥೆಯ ಬ್ಯಾಂಕ್ ಖಾತೆಗೆ ಡಿ.ಟಿ ಮೂಲಕ ನೀಡುವುದು.

5)ಸಹಾಯಕನಿರ್ದೇಶಕರು ಆಯ್ಕೆಯಾದ ಫಲಾನುಭವಿಗಳ ವಿವರಗಳನ್ನು SCSP TSP portal ನಲ್ಲಿ ಕಡ್ಡಾಯವಾಗಿ ಇಂದಿಕರಿಸುವುದು

6)ಸಂಬಂಧಿಸಿದ ಎಲ್ಲಾ ಉಪನಿರ್ದೇಶಕ(ಆಡಳಿತ)ರವರುಗಳು ಫಲಾನುಭವಿಗಳವಂತಿಗ ಹಣವನ್ನು (ಶೇ 10 %) ಧರಗುತ್ತಿಗೆಹೊಂದಿ ಪರಿಕರಗಳನ್ನುಸರಬರಾಜು ಮಾಡುವ ಸಂಸ್ಥೆಯ ಬ್ಯಾಂಕ್ ಖಾತೆಗೆ ಡಿ.ಟಿ ಮೂಲಕ ಸಲ್ಲಿಸಿರುವ ಮಾಹಿತಿಯನ್ನು ದಾಖಲಾತಿಗಳೊಂದಿಗೆ ಕೇಂದ್ರಕಚೇರಿಗೆ ಸಲ್ಲಿಸುವುದು

7)ಕೇಂದ್ರಕಛೇರಿಯಲ್ಲಿ ಟೆಂಡರ್ ಮೂಲಕ ಪರಿಕರಗಳನ್ನು ನಿಯಮಾನುಸಾರ ಖರೀದಿಸಲು ಕ್ರಮವಹಿಸಿ ತಾಲ್ಲೂಕುಗಳಿಗೆ ವಿತರಣೆಯಾಗುವಂತೆ ಕ್ರಮವಹಿಸುವುದು.

8)ಈ ಯೋಜನೆಯ ವಿವರಗಳನ್ನು ಪಶುಭಾಗ್ಯಆಪ್ ನಲ್ಲಿನ ಮೂದಿಸಲು ಸೂಚಿಸಿದೆ.

9)ಯೋಜನೆ ಅನುಷ್ಠಾನದ ಪ್ರಗತಿ ವಿವರಗಳನ್ನು ಆಯುಕ್ತಾಲಯದ ಅಭಿವೃದ್ಧಿಶಾಖೆಗೆ ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಸಲ್ಲಿಸಲು ಸೂಚಿಸಿದೆ.

7) ಯೋಜನಾಅನುಷ್ಠಾನಾಧಿಕಾರಿಗಳು

1) ತಾಲ್ಲೂಕು ಸಹಾಯಕನಿರ್ದೇಶಕರು/ಮುಖ್ಯಪಶುವೈದ್ಯಾಧಿಕಾರಿ (ಆಡಳಿತ) ಯೋಜನಾ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ ಎಲ್ಲಾ ಬಗೆಯ ದಾಖಲೆಪತ್ರಗಳನ್ನುನಿರ್ವಹಿಸುವುದು ಇವರ ಜವಾಬ್ದಾರಿಯಾಗಿರುತ್ತದೆ.

8)ದಾಖಲೆಗಳ ಪಟ್ಟಿ

1) ಫಲಾನುಭವಿ ಆಯ್ಕೆಯಾಗಿರುವ ಬಗ್ಗೆ ಸಮಿತಿಯಿಂದ ಅನುಮೋದಿಸಿದ ಪಟ್ಟಿ

2) [illegible]

3) [illegible]

4)ಫಲಾನುಭವಿಯ [illegible]

5)ಫಲಾನುಭವಿಯಿಂದ ಪರಿಕರ ಸ್ವೀಕೃತಿ ಪ್ರಮಾಣಪತ್ರವನ್ನು ಪಡೆಯಬೇಕು.

9)ಸ್ವತ್ತು ಖರೀದಿ ಸಮಿತಿ

ಅಭಿವೃದ್ಧಿಶಾಖೆ, ಆಯುಕ್ತಾಲಯ ಬೆಂಗಳೂರು ಇವರು ಟೆಂಡರ್ ಮೂಲಕ ನಿಯಮಾನುಸಾರ ಪರಿಕರಗಳನ್ನು ಖರೀದಿಸಿ ತಾಲ್ಲೂಕುಗಳಿಗೆ ಸರಬರಾಜು ಮಾಡಲು ಕ್ರಮವಹಿಸುವುದು

10)ಯೋಜನೆಮೇಲ್ವಿಚಾರಣೆ

1)ಸಂಬಂದಿಸಿದ ಕ್ಷೇತ್ರವ್ಯಾಪ್ತಿಯ ಪಶುವೈದ್ಯಾಧಿಕಾರಿಗಳು ಮೂಲ ದಾಖಲೆಪತ್ರಗಳನ್ನು ಸಹಾಯಕನಿರ್ದೇಶಕರು/ಮುಖ್ಯಪಶುವೈದ್ಯಾಧಿಕಾರಿಗಳು (ಆಡಳಿತ) ರವರಿಗೆ ಸಲ್ಲಿಸುವುದು. ಮತ್ತು ಜೆರಾಕ್ಸ್ ಪ್ರತಿಗಳನ್ನು ತಮ್ಮ ಕಛೇರಿಯಲ್ಲಿ ನಿರ್ವಹಣೆ ಮಾಡುವುದು.

2)ಇಲಾಖಾ ಯೋಜನೆಯಡಿಯಲ್ಲಿ ನೀಡಿದ ಸ್ವತ್ತುಗಳ ಅನುಸರಣೆಮಾಡಿ ಕಾಲಕಾಲಕ್ಕೆ ಮಾಹಿತಿ ನೀಡುವುದು. ಮತ್ತು ವಿತರಿಸಿದ ಸ್ವತ್ತುಗಳ ಅನುಪಾಲನಾವಹಿ (Asset Register) ನಿರ್ವಹಿಸುವುದು.

3)ಉಪನಿರ್ದೇಶಕರುಗಳು ಯೋಜನೆ ಅನುಷ್ಠಾನದ ಬಗ್ಗೆ ಹಾಗೂ ಯೋಜನೆ ಅನುಸರಣೆ /ಪ್ರಗತಿ ಬಗ್ಗೆ ಕಾಲ-ಕಾಲಕ್ಕೆ ಆಯುಕ್ತಾಲಯಕ್ಕೆ ವರದಿ ಸಲ್ಲಿಸುವುದು

ಆಯುಕ್ತರು
ಪಶುಪಾಲನಾಮತ್ತುಪಶುವೈದ್ಯಸೇವಾಇಲಾಖೆ
ಬೆಂಗಳೂರು

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23 ನೇ ಸಾಲಿನ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ಉಳಿಕೆ ಅನುದಾನದಲ್ಲಿ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಯಂತೆ ಕುರಿ/ಮೇಕೆ ಮತ್ತು ಹಸು/ಎಮ್ಮೆ ಘಟಕಗಳನ್ನು ಅನುಷ್ಠಾನಗೊಳಿಸುವ ಯೋಜನೆಗೆ ಅನುಸರಿಸಬೇಕಾದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:-

1. 2022-23ನೇ ಸಾಲಿನ ಆಯವ್ಯಯ ಸವಿವರ ವೆಚ್ಚ ಅಂದಾಜುಗಳು-ಬೇಡಿಕೆವಾರು ಸಂಪುಟ-3 ರ ನಿಗಧಿಯಾದ ಅನುದಾನ.
2. ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 46 ಪಪಾಯೋ 2022, ದಿನಾಂಕ:12.04.2022.
3. ದಿನಾಂಕ:20.05.2022 ರಂದು ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದ 2022-23ನೇ ಸಾಲಿನ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಕ್ರಿಯಾ ಯೋಜನೆ.
4. ಸರ್ಕಾರದ ಆದೇಶ ಸಂಖ್ಯೆ:ಆಇ 102 ವೆಚ್ಚ-4/2022(ಭಾಗ), ದಿನಾಂಕ:22.07.2022.
5. ಆಯುಕ್ತಾಲಯ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಕಡತ ಸಂಖ್ಯೆ: CAHVS-DEV0STK/15/2022-DEVCAH-COMM AHVS-Part(1).

******

## ಪ್ರಸ್ತಾವನೆ:-

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದಂತೆ 2022-23ನೇ ಸಾಲಿನ ಆಯವ್ಯಯ ಸವಿವರ ವೆಚ್ಚ ಅಂದಾಜುಗಳು-ಬೇಡಿಕೆವಾರು, ಸಂಪುಟ-3 ರಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಅನುದಾನ ನಿಗದಿಯಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ. 2022-23ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನಾ ಲೆಕ್ಕ ಶೀರ್ಷಿಕೆಗಳಡಿ ರಾಜ್ಯವಲಯದ ವಿವಿಧ ಕಾರ್ಯಕ್ರಮಗಳಿಗೆ ಮತ್ತು ನಿಗಮ ಮಂಡಳದ ಯೋಜನೆಗಳಿಗೆ ಆಯವ್ಯಯದಲ್ಲಿ ನಿಗದಿಯಾದ ಅನುದಾನಕ್ಕೆ ತಕ್ಕಂತೆ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸಮಾಜ ಕಲ್ಯಾಣ ಇಲಾಖೆಯ ಕ್ರಿಯಾ ಯೋಜನೆಯಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:20.05.2022ರಂದು ನಡೆದ ಅನುಸೂಚಿತ ಜಾತಿಗಳು/ಅನುಸೂಚಿತ ಬುಡಕಟ್ಟುಗಳ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದ 2022-23ನೇ ಸಾಲಿನ ಎಸ್.ಸಿ.ಎಸ್.ಪಿ. / ಟಿ.ಎಸ್.ಪಿ. ಕ್ರಿಯಾ ಯೋಜನೆಯನ್ವಯ 2022-23ನೇ ಸಾಲಿನ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದಡಿ ಉಳಿಕೆಯಾಗುವ ರೂ.53.00 ಕೋಟಿಗಳನ್ನು ಉಪಯೋಗಿಸಲು ಸೂಚಿಸಲಾಗಿದೆ. ರೂ.23.00 ಕೋಟಿಗಳನ್ನು ಪ.ಜಾತಿ/ಪ.ಪಂಗಡದ ಬಿ.ಪಿ.ಎಲ್. ಕುಟುಂಬಗಳಿಗೆ ಕುರಿ/ಮೇಕೆ (10+1) ಘಟಕಗಳಿಗೆ 90% (ಗರಿಷ್ಠ ರೂ.59,400/-) ಸಹಾಯಧನ ನೀಡಲು. ರೂ.30.00 ಕೋಟಿಗಳನ್ನು ಹಸು/ಎಮ್ಮೆ ಘಟಕಗಳಿಗೆ 90% (ಗರಿಷ್ಠ ರೂ.54,000/-) ಸಹಾಯಧನ ನೀಡಲು. ಸೂಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಆದೇಶದಲ್ಲಿ, 2022-23ನೇ ಸಾಲಿನ ಬೇಡಿಕೆ ಸಂಖ್ಯೆ:02 ರಡಿ ಲೆಕ್ಕ ಶೀರ್ಷಿಕೆ:2404-00-191-1-17 ಹೈನು ಅಭಿವೃದ್ಧಿ ಯೋಜನೆಯಡಿ ಉಪ ಶೀರ್ಷಿಕೆ:422 ರಡಿ ರೂ.2500.00 ಲಕ್ಷ ಮತ್ತು ಉಪ ಶೀರ್ಷಿಕೆ:423 ರಡಿ ರೂ.500.00 ಲಕ್ಷಗಳು ಸೇರಿದಂತೆ ಒಟ್ಟು ರೂ.3000.00 (ಮೂರು ಸಾವಿರ ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಿಕೊಂಡು ಆರ್ಥಿಕ ಇಲಾಖೆಯು ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಏಕಕಡತದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ದಿನಾಂಕ: 20-05-2022 ರಂದು ನಡೆದ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದ ಕ್ರಿಯಾಯೋಜನೆಯಂತೆ, 2022-23 ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದಡಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿತಾಯವಾಗುವ ರೂ.23.00 ಕೋಟಿಗಳಲ್ಲಿ 1664 ಕುರಿ/ಮೇಕೆ ಘಟಕ ಮತ್ತು 2427 ಹಸು/ಎಮ್ಮೆ ಘಟಕಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಮಾರ್ಗಸೂಚಿ ಹಾಗೂ ಜಿಲ್ಲಾವಾರು ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳೊಂದಿಗೆ ಘಟಕದ ವಿವರ ಅ) 10+1 ಕುರಿ/ಮೇಕೆ ಘಟಕ ವೆಚ್ಚ ರೂ.66,000/- ಸಹಾಯ ಧನ ಶೇ.90% ರೂ.59400/- ಆ) ಒಂದು ಮಿಶ್ರತಳಿ ಹಸು/ ಸುಧಾರಿತ ತಳಿ ಎಮ್ಮೆ ಘಟಕ ವೆಚ್ಚ ರೂ.60000/- ಸಹಾಯಧನ (ಶೇ.90) ರೂ.54000/- ಆದ್ದರಿಂದ, ರೂ.23.00 ಕೋಟಿ ಅನುದಾನದಲ್ಲಿ 1664 ಕುರಿ/ಮೇಕೆ ಘಟಕ ಮತ್ತು 2427 ಹಸು/ಎಮ್ಮೆ ಘಟಕ ವಿತರಣೆ ಹಾಗೂ ಮಾರ್ಗಸೂಚಿ ಅನುಮೋದನೆಗೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 45 ಪಪಾಯೋ 2022 (ಭಾಗ-4), ಬೆಂಗಳೂರು, ದಿನಾಂಕ:05.11.2022.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ದಿನಾಂಕ:20-05-2022 ರಂದು ನಡೆದ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದ ಕ್ರಿಯಾಯೋಜನೆಯಂತೆ, 2022-23 ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದಡಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿತಾಯವಾಗುವ ಅನುದಾನದಲ್ಲಿ 1) SCP ಅಡಿ 1700 ಹಸು/ಎಮ್ಮೆ ಘಟಕ ಮತ್ತು 1153 ಕುರಿ/ಮೇಕೆ ಘಟಕ ಹಾಗೂ 2) TSP ಅಡಿ 427 ಹಸು/ಎಮ್ಮೆ ಘಟಕ ಮತ್ತು 261 ಕುರಿ/ಮೇಕೆ ಘಟಕಗಳಿಗೆ ಮಿತಿಗೊಳಿಸಿ ಅನುಮೋದನೆ ನೀಡುತ್ತಾ, ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

ಮುಂದುವರೆದು, ರಾಜ್ಯ ಮತ್ತು ದೇಶದಲ್ಲಿ ಪ್ರಸ್ತುತ ಚರ್ಮಗಂಟು ರೋಗೋದ್ರೇಕದ ತೀವ್ರತೆ ಹೆಚ್ಚಾಗಿರುವ ಹಿನ್ನಲೆಯಲ್ಲಿ ಪ್ರಸ್ತುತ ಹೆಚ್ಚಿನ ಜಿಲ್ಲೆಗಳಲ್ಲಿ ಪ್ರಾಣಿಗಳ ಸಂಚಾರವನ್ನು ನಿಷೇಧಿಸಲಾಗಿದೆ. ಹೀಗಾಗಿ ಫಲಾನುಭವಿಗಳ ಆಯ್ಕೆಗೆ ಅನುಮೋದನೆ ನೀಡಲಾಗಿದೆ. ಆದಾಗ್ಯೂ, ಒಟ್ಟಾರೆಯಾಗಿ

ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಪ್ರಾಣಿಗಳನ್ನು ಬಿಡುಗಡೆ ಮಾಡುವ ಮುನ್ನ ಆಯುಕ್ತಾಲಯವು ಪುನಃ ಸರ್ಕಾರದ ಅನುಮತಿ ಪಡೆಯತಕ್ಕದ್ದು. ಈ ಸಮಯದಲ್ಲಿ ಚರ್ಮಗಂಟು ರೋಗೋದ್ರೇಕದ ಸ್ಥಿತಿಯನ್ನು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಕುರಿ/ಮೇಕೆ ಖರೀದಿ ಕಾರ್ಯಾಚರಣೆಗೆ ಯಾವುದೇ ನಿರ್ಬಂಧವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
7. ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
8. ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಪ್ರತಿಗಳು:

1. ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಕಂಟ್ರೋಲ್ ರೂಂ ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 45 ಪಪಾಯೋ 2022 (ಭಾಗ–4), ದಿನಾಂಕ:05.11.2022. ರ ಆದೇಶದಲ್ಲಿ 2022–23ನೇ ಸಾಲಿನ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾಗುವ ಅನುದಾನದಲ್ಲಿ ಅನುಷ್ಠಾನಗೊಳಿಸುವ ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಮಾರ್ಗಸೂಚಿಗಳು ಕೆಳಕಂಡಂತಿವೆ.**

ಕಾರ್ಯಕ್ರಮ:

1) ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ -- (10+1) ಕುರಿ / ಮೇಕೆ ಘಟಕ
2) ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ – 1 ಮಿಶ್ರ ತಳಿ ಹಸು / 1 ಎಮ್ಮೆ

ಲೆಕ್ಕ ಶೀರ್ಷಿಕೆ:2404–00–191–1–17 ಉದ್ದೇಶಿತ ಲೆಕ್ಕ ಶಿರ್ಷಿಕೆ: 422–ವಿಶೇಷ ಘಟಕ ಯೋಜನೆ ಮತ್ತು 423 ಗಿರಿಜನ ಉಪಯೋಜನೆ.

**I ಯೋಜನಾ ವ್ಯಾಪ್ತಿ:**

ರಾಜ್ಯದ 30 ಜಿಲ್ಲೆಗಳಲ್ಲಿ ಸದರಿ ಕಾರ್ಯಕ್ರಮವನ್ನು ಪಶುಭಾಗ್ಯ ತಂತ್ರಾಂಶದ ಮೂಲಕ ಅನುಷ್ಠಾನಗೊಳಿಸುವುದು.

**II ಫಲಾನುಭವಿಗಳಿಗೆ ಸಂಬಂಧಿಸಿದ ಅನುಕೂಲಗಳು:**

- ಫಲಾನುಭವಿಯು ಸ್ವತ: ತಾನೇ ಅಥವಾ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಮತ್ತು ಇಲಾಖೆಯ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಅಲ್ಲಿಯ ಅಧಿಕಾರಿಗಳಿಗೆ ಅಗತ್ಯ ಇರುವ ಮಾಹಿತಿ ನೀಡಿ FRUITS ID (ಗುರುತಿನ ಸಂಖ್ಯೆ) ಪಡೆಯಬಹುದು. ಒಮ್ಮೆ ಈ ರೀತಿ ಪಡೆದ ಗುರುತಿನ ಸಂಖ್ಯೆಯು, ಶಾಶ್ವತ ಗುರುತಿನ ಸಂಖ್ಯೆಯಾಗಲಿದ್ದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಸೇರಿದಂತೆ ಈ ಎಲ್ಲಾ ಇಲಾಖೆಗಳ ಸೌಲಭ್ಯ, ಸವಲತ್ತು ಪಡೆಯಲು ಬಳಸಬಹುದು.
- FRUITS ID (ಗುರುತಿನ ಸಂಖ್ಯೆ) ಪಡೆದ ನಂತರ ಫಲಾನುಭವಿಗಳಿಗೆ ಸಂಬಂಧಿಸಿದ ಜಾತಿ ಪ್ರಮಾಣ ಪತ್ರ, ಜಮೀನಿನ ವಿವರ, ಬಡತನ ರೇಖೆಗಿಂತ ಕೆಳಗಿರುವ ಬಗ್ಗೆ ದೃಢೀಕರಣ, ಫೋಟೋ ಮುಂತಾದ ದಾಖಲೆಗಳನ್ನು ಸಲ್ಲಿಸುವ ಅಗತ್ಯ ಇರುವುದಿಲ್ಲ.

**III ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು:**

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು.
- ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3), ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳು RD No. ಇರುವ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು.
- ಅರ್ಜಿದಾರರು FRUITS ತಂತ್ರಾಂಶದಲ್ಲಿ ನೊಂದಾಯಿಸಿರಬೇಕು.

**IV ಫಲಾನುಭವಿಯ ಆಯ್ಕೆ:**

ವಿಧಾನ ಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಸಹಾಯಕ ನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಇವರು ಸಾಕಷ್ಟು ಪ್ರಚಾರ ನೀಡಿ (ಪತ್ರಿಕಾ ಪ್ರಕಟಣೆ ಮೂಲಕ ಹಾಗೂ ಇತರೆ ಮಾಧ್ಯಮಗಳ) FRUITS ID (ಗುರುತಿನ ಸಂಖ್ಯೆ) ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಂದ ಅರ್ಜಿ ಪಡೆದು, "ಪಶುಭಾಗ್ಯ" ತಂತ್ರಾಂಶದಲ್ಲಿ ಇಂದೀಕರಿಸುವುದು. ವಿಧಾನ ಸಭಾ ಕ್ಷೇತ್ರವಾರು, ಫಲಾನುಭವಿ ಆಯ್ಕೆ ಸಮಿತಿ ಮೂಲಕ ನಿಗದಿಪಡಿಸಿದ ಯೋಜನೆ, ಘಟಕ ಮತ್ತು ಗುರಿಗೆ ಅನುಗುಣವಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

...2

| ಫಲಾನುಭವಿ ಆಯ್ಕೆ ಸಮಿತಿ | |
|---|---|
| ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು | ಅಧ್ಯಕ್ಷರು |
| ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ [illegible] ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಶಾಸಕರು (ವಿಧಾನ ಪರಿಷತ್ತು) | ಸದಸ್ಯರು |
| ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ | ಸದಸ್ಯರು |
| ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿ | ಸದಸ್ಯರು |
| ತಾಲ್ಲೂಕು ಸಹಾಯಕ ನಿರ್ದೇಶಕರು/ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ), ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ | ಸದಸ್ಯ ಕಾರ್ಯದರ್ಶಿ |

**V ಸಮಿತಿಯ ಕಾರ್ಯವ್ಯಾಪ್ತಿ:**

- ಫಲಾನುಭವಿಗಳನ್ನು ನಿರ್ದಿಷ್ಟ ಸಮಯದಲ್ಲಿ ನಿಗದಿತ ಗುರಿಗಳನ್ವಯ ಆಯ್ಕೆ ಮಾಡುವುದು.
- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಲಹೆ ನೀಡುವುದು.
- ಗುಣಮಟ್ಟದ ಸ್ವತ್ತುಗಳನ್ನು ಖರೀದಿಸಲು ತಾಂತ್ರಿಕ ಸಲಹೆ ನೀಡುವುದು.
- ಆಯ್ಕೆಯಾದ ಫಲಾನುಭವಿ ನಿರಾಕರಿಸಿದ ಹಾಗೂ ಇನ್ನಿತರೆ ಸಂಧರ್ಭಗಳಲ್ಲಿ ಅನುದಾನ ವ್ಯಪಗತವಾಗದಂತೆ ಸಮರ್ಪಕವಾಗಿ ವೆಚ್ಚ ಮಾಡಲು ಪರ್ಯಾಯ ಫಲಾನುಭವಿಗಳನ್ನು ಆಯ್ಕೆ ಮಾಡಿ. ಕಾರ್ಯಕ್ರಮವನ್ನು ನಿಗದಿತ ಸಮಯದಲ್ಲಿ ಅನುಷ್ಠಾನಗೊಳಿಸುವುದು.

**VI ಸದಸ್ಯ ಕಾರ್ಯದರ್ಶಿ ರವರ ಕಾರ್ಯವ್ಯಾಪ್ತಿ:**

- ಫಲಾನುಭವಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಶುಭಾಗ್ಯ ತಂತ್ರಾಂಶದಲ್ಲಿ ನಮೂದಿಸುವುದು. ವಿಧಾನಸಭಾ ಕ್ಷೇತ್ರಾವಾರು / ಜಿಲ್ಲಾವಾರು / ತಾಲ್ಲೂಕುವಾರು ಮಾಹಿತಿಗಳು real time ನಲ್ಲಿ ಲಭ್ಯವಿರುವಂತೆ ನಮೂದಿಸತಕ್ಕದ್ದು.
- ಫಲಾನುಭವಿಗಳ ಆಯ್ಕೆ ನಂತರ ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳು ಯೋಜನೆಯನ್ನು ಅನುಷ್ಠಾನ ಮಾಡಲು ಕ್ರಮ ವಹಿಸುವುದು.
- ಪಶುಭಾಗ್ಯ ತಂತ್ರಾಂಶದಲ್ಲಿ ಫಲಾನುಭವಿಗಳ ಸಂಪೂರ್ಣ ವಿವರವನ್ನು ಕ್ರೋಢೀಕರಿಸುವುದು.
- www.SCSPTSP.kar.nic.in ತಂತ್ರಾಂಶದಲ್ಲಿಯೂ ಸಹ ಮಾಹಿತಿಯನ್ನು ನಮೂದಿಸಿವುದು.

**VII ಯೋಜನಾ ಅನುಷ್ಠಾನ ವಿಧಾನ:**

- ರಾಜ್ಯ ಮಟ್ಟದಲ್ಲಿ ನಿಗದಿತ ಅನುದಾನ ಹಾಗೂ ಜಿಲ್ಲೆಯ ಗ್ರಾಮೀಣ ಭಾಗದ ಜನಸಂಖ್ಯೆಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ) ಅನುಗುಣವಾಗಿ ಜಿಲ್ಲಾವಾರು ಆರ್ಥಿಕ ಹಾಗೂ ಭೌತಿಕ ಗುರಿಗಳನ್ನು ನಿಗಧಿಪಡಿಸುವುದು.
- ಜಿಲ್ಲಾ ಉಪ ನಿರ್ದೇಶಕರು ತಾಲ್ಲೂಕುವಾರು ಮತ್ತು ಘಟಕವಾರು ಆಯಾ ತಾಲ್ಲೂಕಿನಲ್ಲಿರುವ ಜನಸಂಖ್ಯೆಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ) ಅನುಸಾರವಾಗಿ ಆರ್ಥಿಕ ಹಾಗೂ ಭೌತಿಕ ಗುರಿಗಳನ್ನು ಹಂಚಿಕೆ ಮಾಡುವುದು.
- ಸಹಾಯಕ ನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ)

1. ಆಯಾ ತಾಲ್ಲೂಕಿಗೆ ನಿಗದಿಯಾದ ಗುರಿಗಳನ್ನು ವಿಧಾನಸಭಾ ಕ್ಷೇತ್ರವಾರು ಆರ್ಥಿಕ ಹಾಗೂ ... ಭೌತಿಕ ಗುರಿಗಳನ್ನು ನಿಗದಿಪಡಿಸುವುದು.
2. ಈಗಾಗಲೇ ವಿಧಾನ ಸಭಾ ಕ್ಷೇತ್ರವಾರು ಸ್ವೀಕರಿಸಿರುವ ಅರ್ಜಿಗಳ ಮಾಹಿತಿಯನ್ನು ಪಶು ಭಾಗ್ಯ ತಂತ್ರಾಂಶದ ಮೂಲಕ ಪಡೆದು, ಆಯ್ಕೆ ಸಮಿತಿ ಮುಂದೆ ಮಂಡಿಸಿ ನಿಗದಿತ ಗುರಿಗೆ ಅನುಗುಣವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು.
3. ಫಲಾನುಭವಿಗಳನ್ನು ಆಯ್ಕೆಗೊಳಿಸುವಾಗ ಮುಖ್ಯ ಮಂತ್ರಿಗಳ ಕಾರ್ಯಾಲಯ/ ಇಲಾಖಾ ಸಚಿವರಿಂದ/ ಇಲಾಖಾ & ಇತರೆ ಸಚಿವಾಲಯದಿಂದ/ ಆಯುಕ್ತಾಲಯದಿಂದ/ "ಜನಸ್ಪಂದನ" ಕೋಶದಿಂದ ಸ್ವೀಕರಿಸಿರುವ ಅರ್ಜಿಗಳನ್ನು ಸಹಾ ಫಲಾನುಭವಿಗಳ ಆಯ್ಕೆ ವೇಳೆ ಪರಿಗಣಿಸಲು ಆಯ್ಕೆ ಸಮಿತಿಯ ಮುಂದೆ ಮಂಡಿಸುವುದು.

- ಜಿಲ್ಲಾ ಉಪ ನಿರ್ದೇಶಕರುಗಳು ವಿಧಾನಸಭಾ ಕ್ಷೇತ್ರಾವಾರು ನಿಗದಿಯಾದ ಗುರಿಗಳನ್ನು ತಾಲ್ಲೂಕು ಸಹಾಯಕ ನಿರ್ದೇಶಕರು/ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಇವರಿಂದ ಪಡೆದು, ಲೀಡ್ ಬ್ಯಾಂಕ್ ಮುಖಾಂತರ ತಾಲ್ಲೂಕುವಾರು ಬ್ಯಾಂಕ್ಗಳ ಗುರಿ ನಿಗದಿಪಡಿಸಲು ಕ್ರಮ ವಹಿಸುವುದು.
- ಫಲನಾಭವಿಗಳಿಂದ ವಂತಿಗೆ ಸ್ವೀಕರಿಸುವಂತಹ ಯೋಜನೆಗಳನ್ನು ವಂತಿಗೆ ಹಣವನ್ನು ಫಲಾನುಭಾವಿಗಳಿಂದ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿ, ನಂತರ ಸಹಾಯಧನವನ್ನು ಅದೇ ಖಾತೆಗೆ ಜಮಾ ಮಾಡಿ ಸ್ವತ್ತನ್ನು ಮಾರಾಟ ಮಾಡಿರುವವರಿಗೆ ಪಾವತಿಸುವಂತೆ ಅನುಷ್ಠಾನಾಧಿಕಾರಿಗಳು ಕಾರ್ಯಗತಗೊಳಿಸುವುದು.
- ಸಹಾಯಕ ನಿರ್ದೇಶಕರು ವಿಳಂಬವಿಲ್ಲದೇ ಆಯ್ಕೆಯಾದ ಫಲಾನುಭವಿಗಳ ಅರ್ಜಿಯನ್ನು ದಾಖಲೆಗಳೊಂದಿಗೆ ಸಂಬಂಧಿಸಿದ ಪಶುವೈದ್ಯಾಧಿಕಾರಿಗಳ ಮುಖಾಂತರ ಸಾಲ ಮಂಜೂರಾತಿಗಾಗಿ ಬ್ಯಾಂಕ್ಗಳಿಗೆ ಸಲ್ಲಿಸುವುದು ಹಾಗೂ ಈ ಬಗ್ಗೆ ಪಶುಭಾಗ್ಯ ತಂತ್ರಾಂಶದಲ್ಲಿ ನಮೂದಿಸುವುದು.
- ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಪಶುವೈದ್ಯಾಧಿಕಾರಿಗಳು ಸಂಬಂಧಿಸಿದ ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಪತ್ರ ಪಡೆದು ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.
- ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳ ಮುಖಾಂತರವು ಸಹ ಸಾಲ ಮಂಜೂರಾತಿಯೊಂದಿಗೆ ಅನುಷ್ಠಾನಗೊಳಿಸುವುದು.
- ಸಹಾಯಕ ನಿರ್ದೇಶಕರು ಅಥವಾ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಸಹಾಯಧನವನ್ನು ಆಯಾ ಬ್ಯಾಂಕ್ಗಳಿಗೆ ಬಿಡುಗಡೆಗೊಳಿಸಿ ಯೋಜನೆ ಅನುಷ್ಠಾನಗೊಳಿಸುವುದು.
- ಆಯ್ಕೆಗೊಂಡ ಫಲಾನುಭವಿಗಳ ರಾಸುಗಳಿಗೆ ಯುಐಡಿ ಸಂಖ್ಯೆ ಇರುವ ಟ್ಯಾಗ್‌ಗಳನ್ನು ಅಳವಡಿಸಿ, ಫಲಾನುಭವಿ, ಮಾರಾಟಗಾರ, ಬ್ಯಾಂಕ್ ಪ್ರತಿನಿಧಿ ಮತ್ತು ಅನುಷ್ಠಾನಾಧಿಕಾರಿ ಸ್ವತ್ತಿನೊಂದಿಗೆ ಇರುವ ಫೋಟೋವನ್ನು "ಪಶುಭಾಗ್ಯ ತಂತ್ರಾಂಶದಲ್ಲಿ" ಎಲ್ಲಾ ವಿವರಗಳೊಂದಿಗೆ ದಾಖಲಿಸುವುದು.
- ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ದನದ ಕೊಟ್ಟಿಗೆ ನಿರ್ಮಾಣಕ್ಕಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (MGNREGA) ಯೋಜನೆಯಡಿ ಅವಕಾಶ ಕಲ್ಪಿಸಲು ಸ್ಥಳೀಯ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳಿಗೆ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ನೀಡುವುದು.
- ಕಳೆದ 5 ವರ್ಷಗಳಲ್ಲಿ ಪಶುಪಾಲನಾ ಇಲಾಖೆಯಲ್ಲಿ ವಿವಿಧ ಯೋಜನೆಗಳಲ್ಲಿ ಹೈನುಗಾರಿಕೆಗೆ ಸಹಾಯಧನ ಸವಲತ್ತು ಪಡೆದಿರುವ ಕುಟುಂಬಗಳು ಮತ್ತೆ ಈ ಯೋಜನೆಯ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ.
- ಈ ಯೋಜನೆಯಡಿಯ ಫಲಾನುಭವಿಗಳ ಸ್ವತ್ತುಗಳನ್ನು ವಿಮೆಗೊಳಪಡಿಸಲು ಕ್ರಮ ವಹಿಸುವುದು.
- ಆಯ್ಕೆಯಾದ ಫಲಾನುಭವಿಯು ಯೋಜನೆಯ ಅನುಷ್ಠಾನಕ್ಕೆ ಮೊದಲು ಮರಣ ಹೊಂದಿದಲ್ಲಿ ಅವರ ಅಧಿಕೃತ ವಾರಸುದಾರರಿಗೆ ಈ ಯೋಜನೆಯ ಸವಲತ್ತನ್ನು ನೀಡಲು ಕ್ರಮ ವಹಿಸುವುದು.
- ಅನುಷ್ಠಾನಗೊಳಿಸಿದ ಕೂಡಲೇ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಪ್ರಗತಿ ವಿವರಗಳನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ತಪ್ಪದೇ ಕ್ರಮ ವಹಿಸುವುದು.

VIII ಯೋಜನಾ ಅನುಷ್ಠಾನಾಧಿಕಾರಿಗಳು:

ಸ್ಥಳೀಯ ಅಧಿಕಾರಿಗಳಾದ ಸಹಾಯಕ ನಿರ್ದೇಶಕರು ಅಥವಾ ಪಶುವೈದ್ಯಾಧಿಕಾರಿಗಳು ಯೋಜನೆಯ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ ಮತ್ತು ಈ ಕೆಳಗಿನ ಎಲ್ಲಾ ದಾಖಲೆ ಪತ್ರಗಳ ಮೂಲ ಪ್ರತಿಗಳನ್ನು ನಿರ್ವಹಿಸುವುದು ಅವರ ಜವಾಬ್ದಾರಿ ಆಗಿರುತ್ತದೆ.

1) ಸಾಲ ಮಂಜೂರಾತಿ ಪತ್ರ.
2) FRUITS ID ದೃಢೀಕರಣ ಪತ್ರ.
3) ಫಲಾನುಭವಿಯಿಂದ ಸಹಾಯಧನ ಸ್ವೀಕೃತಿ ಪತ್ರ.
4) ಫಲಾನುಭವಿಯೊಂದಿಗೆ ರಾಸುವಿನ ಭಾವಚಿತ್ರ-3 ವಿವಿಧ ಕೋನಗಳಲ್ಲಿ.
5) ಸ್ವತ್ತು ಖರೀದಿ ನಗದು ರಸೀದಿ.
6) ಜಾನುವಾರು ಆರೋಗ್ಯ ದೃಢೀಕರಣ ಪತ್ರ, ವಿಮಾ ಪಾಲಿಸಿ.
7) ಸಾಗಾಣಿಕೆ ವೆಚ್ಚದ ಬಿಲ್ (ರಸೀದಿ)
8) ಪಶು ಆಹಾರ ಖರೀದಿ ಬಿಲ್‌ಗಳು.
9) ಇತರೆ ದಾಖಲಾತಿಗಳು.
10) ಫಲಾನುಭವಿಗಳ ಆಧಾರ್ ಕಾರ್ಡ್ ಪ್ರತಿ.

**IX ಸಹಾಯಧನ ಸೆಳೆಯುವ ವಿಧಾನ:**

- ಅನುಷ್ಠಾನಾಧಿಕಾರಿಗಳು ಸಾದಿಲ್ವಾರು ಬಿಲ್ಲುಗಳನ್ನು ರಾಜ್ಯವಲಯದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕೆ-2 ಮುಖಾಂತರ ತಯಾರಿಸಿ ಮೇಲು ರುಜುವಿಗಾಗಿ ಉಪ ನಿರ್ದೇಶಕರಿಗೆ ಸಲ್ಲಿಸುವುದು.
- ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಪಟ್ಟಿಯೊಂದಿಗೆ ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಬಗ್ಗೆ ಒಪ್ಪಿಗೆ ಪತ್ರ/ಫಲಾನುಭವಿಗಳ ವಂತಿಕೆ ಭರಿಸಿರುವ ಕುರಿತು ದಾಖಲಾತಿಗಳೊಂದಿಗೆ ಉಪ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ಸಹಾಯಧನವನ್ನು ಫಲಾನುಭವಿಗಳ ಖಾತೆಗೆ ಜಮೆ ಮಾಡುವ ಮುನ್ನ, ಸದರಿ ಸಹಾಯಧನವನ್ನು ಯೋಜನೆ ಅನುಷ್ಠಾನಗೊಳಿಸುವವರೆಗೆ "Hold Balance" ನಲ್ಲಿ ಇರಿಸುವಂತೆ ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಅನುಷ್ಠಾನಾಧಿಕಾರಿಗಳು ಲಿಖಿತ ವಿನಂತಿ ನೀಡುವುದು. ಇದನ್ನು ಜಿಲ್ಲಾ ಉಪ ನಿರ್ದೇಶಕರುಗಳು ಖಾತ್ರಿ ಪಡಿಸಿಕೊಳ್ಳುವುದು.
- ಸಂಬಂಧಿಸಿದ ಫಲಾನುಭವಿಗಳ ಖಾತೆಗೆ ಸಹಾಯಧನ ಜಮೆ ಮಾಡುವ ಮುನ್ನ ಸಹಾಯಧನವನ್ನು ಯೋಜನೆ ಅನುಷ್ಠಾನಕ್ಕಲ್ಲದೇ ಬೇರೆ ಯಾವುದೇ ಕಾರಣಕ್ಕೂ ಸೆಳೆಯದಿರುವ ಬಗ್ಗೆ ಹಾಗೂ ಸಂಬಂಧಿಸಿದ ಖಾತೆಯಲ್ಲಿ Hold Balance ಇರಿಸುವಂತೆ ಫಲಾನುಭವಿಯು ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ವಿನಂತಿಸುತ್ತಾ ಸಲ್ಲಿಸಿರುವುದರ ಪತ್ರದ ಪ್ರತಿಯನ್ನು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ಉಪ ನಿರ್ದೇಶಕರು ಸಹಾಯಧನವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ "DBT" ಮುಖಾಂತರ ವರ್ಗಾಯಿಸುವುದು.
- ಸಹಾಯಧನವನ್ನು DBT ಮಾಡಿದ ನಂತರ ಅನುಷ್ಠಾನಾಧಿಕಾರಿಗಳು ಸಹಾಯಧನ ಮತ್ತು ಬ್ಯಾಂಕ್ ಸಾಲ/ಫಲಾನುಭವಿಗಳ ವಂತಿಕೆ ಕ್ರೋಢೀಕರಿಸಿ ಸ್ವತ್ತನ್ನು ಖರೀದಿಸಿ (ಒಂದು ಮಿಶ್ರತಳಿ ಹಸು/ಎಮ್ಮೆ ಅಥವಾ 10+1 ಕುರಿ/ಮೇಕೆ ಘಟಕ) ಫಲಾನುಭವಿಗಳಿಗೆ ವಿತರಿಸುವುದು.
- ಫಲಾನುಭವಿ ಆಯ್ಕೆಯಾಗಿರುವ ಬಗ್ಗೆ ಸಮಿತಿಯಿಂದ ಅನುಮೋದಿಸಿದ ಸಮಿತಿ ಸದಸ್ಯರುಗಳ ಸಹಿಯೊಂದಿಗೆ ಪಟ್ಟಿಯನ್ನು ಪಶು ಭಾಗ್ಯ ತಂತ್ರಾಂಶದಲ್ಲಿರುವ ಮಾಹಿತಿಯೊಂದಿಗೆ ಸಹಾಯಕ ನಿರ್ದೇಶಕರು ಸಮೀಕರಿಸುವುದು.
- FRUITS ID ಇರುವ ದೃಢೀಕರಣ ಪತ್ರ
- ಫಲಾನುಭವಿಯ ಭಾವಚಿತ್ರ

- ಫಲಾನುಭವಿಯ ಕುಟುಂಬ ಈ ಹಿಂದೆ ಇಲಾಖೆಯಿಂದ ಸಹಾಯ ಪಡೆಯದಿರುವ ಬಗ್ಗೆ ದೃಢೀಕರಣ ಪತ್ರ.
- ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಬಗ್ಗೆ ಒಪ್ಪಿಗೆ ಪತ್ರ (ನಿಗದಿತ ನಮೂನೆಯಲ್ಲಿ) ಪಡೆಯುವುದು
- ಫಲಾನುಭವಿಯಿಂದ ಸಹಾಯಧನ ಪಡೆದಿರುವ ಬಗ್ಗೆ ಮುಂಗಡ ರಶೀದಿ (ತ್ರಿಪ್ರತಿಯಲ್ಲಿ).

X ಸ್ವತ್ತು ಖರೀದಿ ಸಮಿತಿ:

- ಫಲಾನುಭವಿಯ ಗ್ರಾಮ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಸಹಾಯಕ ನಿರ್ದೇಶಕರು / ಪಶುವೈದ್ಯಾಧಿಕಾರಿ.
- ಬ್ಯಾಂಕ್ ಅಧಿಕಾರಿ/ಪ್ರತಿನಿಧಿ (ಬ್ಯಾಂಕುಗಳಿಂದ ಸಾಲ ಪಡೆದ ಯೋಜನೆಗಳಿಗೆ ಮಾತ್ರ)
- ಫಲಾನುಭವಿ.
- ಮಾರಾಟಗಾರ.

XI ಯೋಜನೆ ಮೇಲ್ವಿಚಾರಣೆ:

- ಅನುಷ್ಠಾನಾಧಿಕಾರಿಗಳು ಸ್ವತ್ತು ಖರೀದಿ ಸಮಿತಿ ಮೂಲಕ ರಾಸುಗಳ ಖರೀದಿ ಮಾಡುವುದು.
- ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ಮೂಲ ದಾಖಲೆ ಪತ್ರಗಳನ್ನು ತಮ್ಮ ಕಛೇರಿಯಲ್ಲಿ ನಿರ್ವಹಣೆ ಮಾಡುವುದು.
- ಅನುಷ್ಠಾನಾಧಿಕಾರಿಗಳು ಯೋಜನೆಯಲ್ಲಿ ನೀಡಿದ ರಾಸುಗಳ ಆರೋಗ್ಯ ರಕ್ಷಣೆ. ಲಸಿಕೆ ಕಾರ್ಯಕ್ರಮ ಕೈಗೊಳ್ಳುವುದು.
- ವಿತರಿಸಿದ ಸ್ವತ್ತುಗಳ ಅನುಪಾಲನೆ ವಹಿ (Asset Register) ನಿರ್ವಹಿಸುವುದು.
- ಅನುಷ್ಠಾನಾಧಿಕಾರಿಗಳು ಹಣ ವಿನಿಯೋಗ ದೃಢೀಕರಣ ಪತ್ರಗಳನ್ನು ಬ್ಯಾಂಕ್‌ಗಳಿಂದ ಪಡೆದು. ದೃಢೀಕರಿಸಿ ತಾಲ್ಲೂಕು ಸಹಾಯಕ ನಿರ್ದೇಶಕರುಗಳ ಮೂಲಕ ಉಪ ನಿರ್ದೇಶಕರಿಗೆ ಸಲ್ಲಿಸುವುದು.
- ಉಪ ನಿರ್ದೇಶಕರುಗಳು ಯೋಜನೆಯ ಅನುಷ್ಠಾನದ ಬಗ್ಗೆ ಹಾಗೂ ಯೋಜನೆಯ ಅನುಸರಣೆ / ಪ್ರಗತಿಯ ಬಗ್ಗೆ ಕಾಲಕಾಲಕ್ಕೆ ವರದಿ ಪಶುಭಾಗ್ಯ ತಂತ್ರಾಂಶದಲ್ಲಿ ಸಲ್ಲಿಸುವುದು.
- ಜಿಲ್ಲೆಯ ಉಪ ನಿರ್ದೇಶಕರು ಅನುಷ್ಠಾನಗೊಂಡ ಯೋಜನೆಯ ಪ್ರತಿ ತಾಲ್ಲೂಕಿನ ಕನಿಷ್ಠ ಶೇ.2 ರಷ್ಟು ಹಾಗೂ ತಾಲ್ಲೂಕು ಸಹಾಯಕ ನಿರ್ದೇಶಕರು ಶೇ.5 ರಷ್ಟು ಫಲಾನುಭವಿಗಳ ಮನೆಗೆ ಭೇಟಿ ನೀಡಿ ಅನುಷ್ಠಾನದ ಮತ್ತು ಸ್ವತ್ತನ್ನು ನಿರ್ವಹಿಸಿರುವ ಬಗ್ಗೆ ಪರಿಶೀಲಿಸಿ ಮಾಡಬೇಕು.
- ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮ ಅನುಷ್ಠಾನಗೊಂಡ ನಂತರ ಕನಿಷ್ಠ ಪ್ರತಿ ಮಾಹೆ ಒಮ್ಮೆ ಖುದ್ದು ಭೇಟಿ ನೀಡಿ ಸ್ವತ್ತು ಪರಿಶೀಲನೆ ಮಾಡಿ ಪಶುಭಾಗ್ಯ ತಂತ್ರಾಂಶದಲ್ಲಿ ಮಾಹಿತಿ ದಾಖಲಿಸುವುದು ಮತ್ತು ಈ ಕುರಿತು ಸ್ವತ್ತು ಅನುಸರಣೆ ವಹಿಯಲ್ಲಿ ನಮೂದಿಸುವುದು.

XII ಕ್ರಮಗಳು:

- ಸ್ವತ್ತು ಖರೀದಿ ಸಮಯದಲ್ಲಿ ಆಯಾ ಪ್ರದೇಶಕ್ಕೆ ಸೂಕ್ತವಾದ ತಳಿಯನ್ನು ಖರೀದಿಗೆ ಆದ್ಯತೆ ನೀಡುವುದು.
- ವಿವಿಧ ಯೋಜನೆಗಳಲ್ಲಿ ಬರುವ ಘಟಕದಲ್ಲಿರುವಂತೆ ರಾಸುಗಳನ್ನು ಖರೀದಿಸಿ, ಮೂರು ವರ್ಷದ ವಿಮೆ ಕಡ್ಡಾಯವಾಗಿ ಮಾಡಿಸುವುದು.
- ಸ್ವತ್ತು ಖರೀದಿ ಮಾಡುವಾಗ ತುಂಬು ಗರ್ಭದಿಂದಿರುವ ಅಥವಾ ಇತ್ತೀಚೆಗೆ ಕರು ಹಾಕಿದ (Recently Calved) ದಿನಕ್ಕೆ 08 ರಿಂದ 10 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಮಿಶ್ರ ತಳಿ ಹಸು ಅಥವಾ ಇತ್ತೀಚೆಗೆ ಕರು ಹಾಕಿದ / ತುಂಬು ಗರ್ಭದ ದಿನಕ್ಕೆ 05 ರಿಂದ 06 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಒಂದು ಸುಧಾರಿತ ಎಮ್ಮೆ ಖರೀದಿ ಮಾಡುವುದು.
- ಹೈನುಗಾರಿಕೆ ಯೋಜನೆಯಡಿಯಲ್ಲಿ ಖರೀದಿ ಸಮಿತಿಯ ವಿವೇಚನೆಗೆ ಒಳಪಟ್ಟು ರಾಸುಗಳನ್ನು ಹೊರ ಜಿಲ್ಲೆ / ಹೊರ ರಾಜ್ಯಗಳಿಂದ ಖರೀದಿಸಬಹುದಾಗಿದೆ.

- ಮಿಶ್ರ ತಳಿ ಹಸು / ಸುಧಾರಿತ ಎಮ್ಮೆ / ರಾಸುಗಳನ್ನು ಖರೀದಿ ಸ್ಥಳದಿಂದ ಫಲಾನುಭವಿಯ ಕೊಟ್ಟಿಗೆಯವರೆಗೆ ಸಾಗಾಣಿಕೆ ಮಾಡಲು ತಗಲುವ ವೆಚ್ಚವನ್ನು ಯೋಜನಾ ವೆಚ್ಚದಿಂದಲೇ ಭರಿಸುವುದು.
- ಖರೀದಿಸಿದ ರಾಸುಗಳಿಗೆ 12 ಅಂಕಿಯ ಪಶು ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ INAPH ತಂತ್ರಾಂಶದಲ್ಲಿ ನಮೂದಿಸುವುದು ಹಾಗೂ ಖರೀದಿಸಿದ ರಾಸುಗಳಿಂದ ಜನ್ಮ ತಾಳಿದ ಕರುಗಳ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ನಮೂದಿಸುವುದು.
- ಆಯ್ಕೆಯಾದ ಫಲಾನುಭವಿಗಳ ವಿವರವನ್ನು www.SCSPTSP.kar.nic.in ತಂತ್ರಾಂಶದಲ್ಲಿ ನಮೂದಿಸುವುದು.

**XIII ಅನುಷ್ಠಾನಗೊಳಿಸಬಹುದಾದ ಘಟಕ ವಿವರ:**

**ಒಂದು ಮಿಶ್ರ ತಳಿ ಹಸು /ಎಮ್ಮೆ ಘಟಕದ ವಿವರ**

| ಕ್ರ ಸಂ | ಘಟಕದ ವಿವರ | ಘಟಕದ ಮೊತ್ತ | ಸಹಾಯಧನ | |
|---|---|---|---|---|
| | | | ಪರಿಶಿಷ್ಟ ಜಾತಿ (ಶೇ:90%) | ಪ.ಪಂಗಡ (ಶೇ90%) |
| 1. | ಹೈನುಗಾರಿಕೆ ಘಟಕ ಒಂದು ಮಿಶ್ರ ತಳಿ ಹಸು /ಎಮ್ಮೆ | 60,000 | 54,000 | 54.000 |

**ಘಟಕದ ವಿವರ**

| ಕ್ರ.ಸಂ | ವಿವರ | ಮೊತ್ತ ರೂ.ಗಳಲ್ಲಿ |
|---|---|---|
| 1 | ಒಂದು ಮಿಶ್ರ ತಳಿ ಹಾಲು ಕರೆಯುವ ಹಸು/ಎಮ್ಮೆ | 52,000 |
| 2 | ಜಾನುವಾರು ವಿಮೆ ಮೊತ್ತ (ಮೂರು ವರ್ಷಕ್ಕೆ) | 2,500 |
| 3 | ಸಾಗಾಣಿಕೆ ವೆಚ್ಚ (ಗರಿಷ್ಠ) ಮತ್ತು ಇತರೆ | 2,500 |
| 4 | ಪಶು ಆಹಾರ ಮತ್ತು ಲವಣ ಮಿಶ್ರಣ ವೆಚ್ಚ | 3,000 |
| | ಒಟ್ಟು | 60,000 |

ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತ **ರೂ.6000/-ಗಳನ್ನು** ಫಲಾನುಭವಿಗಳ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು

**10+1 ಕುರಿ/ಮೇಕೆ ಘಟಕದ ವಿವರ**

| ಕ್ರಸಂ | ಘಟಕದ ವಿವರ | ಘಟಕದ ಮೊತ್ತ | ಸಹಾಯಧನ | |
|---|---|---|---|---|
| | | | ಪರಿಶಿಷ್ಟ ಜಾತಿ ಶೇ:90%) | ಪ.ಪಂಗಡ (ಶೇ.90%) |
| 1. | 10+1 ಕುರಿ/ಮೇಕೆ ಘಟಕ | ರೂ:66,000 | ರೂ:59,400 | ರೂ:59,400 |

## ಘಟಕದ ವಿವರ

| ಕ್ರ.ಸಂ | ವಿವರ | ಮೊತ್ತ ರೂ.ಗಳಲ್ಲಿ |
|---|---|---|
| 1 | ಆರು ತಿಂಗಳ ವಯಸ್ಸಿಗೆ ಮೇಲ್ಪಟ್ಟ 10 ಕುರಿ/ಮೇಕೆ ಖರೀದಿಗೆ (ಒಂದು ಕುರಿ/ಮೇಕೆಗೆ ರೂ.5500 ರಂತೆ) ಗರಿಷ್ಠ ಮೊತ್ತ | 55,000 |
| 2 | 6 ತಿಂಗಳ ವಯಸ್ಸಿಗೆ ಮೇಲ್ಪಟ್ಟ 1 ಟಗರು/ಹೋತ ಖರೀದಿಗೆ | 8,000 |
| 3 | ಸಾಗಾಣಿಕೆ ಮತ್ತು ಇತರೆ ವೆಚ್ಚ | 3,000 |
| | ಒಟ್ಟು | 66,000 |

ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತ ರೂ.6600/-ಗಳನ್ನು ಫಲಾನುಭವಿಗಳ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು.

(ಪಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** 2023-24ನೇ ಸಾಲಿನ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ಉಳಿಕೆ ಅನುದಾನದಲ್ಲಿ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಯಂತೆ SCSP/TSP ಫಲಾನುಭವಿಗಳಿಗೆ ಒಂದು ಮಿಶ್ರತಳಿ ಹಸು ಘಟಕವನ್ನು ಅನುಷ್ಠಾನಗೊಳಿಸುವ ಯೋಜನೆಗೆ ಅನುಸರಿಸಬೇಕಾದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:-
1. 2023-24ನೇ ಸಾಲಿನ (ಜುಲೈ-2023) ಆಯವ್ಯಯ ಸಾಲುವಾರು ವೆಚ್ಚ ಅಂದಾಜುಗಳು-ಬೇಡಿಕೆವಾರು ಸಂಪುಟ-3 ರಲ್ಲಿ ನಿಗಧಿಯಾದ ಅನುದಾನ.
2. ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 19 ಪಪಾಯೋ 2023, ದಿನಾಂಕ:07.08.2023.
3. ದಿನಾಂಕ:31.07.2023 ರಂದು ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದ 2023-24ನೇ ಸಾಲಿನ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಕ್ರಿಯಾ ಯೋಜನೆ.
4. ಆಯುಕ್ತಾಲಯ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಕಡತ ಸಂಖ್ಯೆ: CAHVS-DEV0STK/4/2023-DEVCAH-COMM AHVS (E-1185078).

******

**ಪ್ರಸ್ತಾವನೆ:-**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ 2023-24ನೇ ಸಾಲಿನ (ಜುಲೈ-2023) ಆಯವ್ಯಯ ಸಾಲುವಾರು ವೆಚ್ಚ ಅಂದಾಜುಗಳು-ಬೇಡಿಕೆವಾರು ಸಂಪುಟ-3 ರಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಪಶುಸಂಗೋಪನೆ)ಗೆ ಅನುದಾನ ನಿಗಧಿಯಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ 2023-24ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನಾ ಲೆಕ್ಕ ಶೀರ್ಷಿಕೆಗಳಡಿ ರಾಜ್ಯವಲಯದ ವಿವಿಧ ಕಾರ್ಯಕ್ರಮಗಳಿಗೆ ಮತ್ತು ನಿಗಮ ಮಂಡಳದ ಯೋಜನೆಗಳಿಗೆ ಆಯವ್ಯಯದಲ್ಲಿ ನಿಗಧಿಯಾದ ಅನುದಾನಕ್ಕೆ ತಕ್ಕಂತೆ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸಮಾಜ ಕಲ್ಯಾಣ ಇಲಾಖೆಯ ಕ್ರಿಯಾ ಯೋಜನೆಯಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:31.07.2023ರಂದು ನಡೆದ ಅನುಸೂಚಿತ ಜಾತಿಗಳು/ಅನುಸೂಚಿತ ಬುಡಕಟ್ಟುಗಳ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದ 2023-24ನೇ ಸಾಲಿನ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಕ್ರಿಯಾ ಯೋಜನೆಯ ಕ್ರಮ ಸಂಖ್ಯೆ (8)ರಲ್ಲಿ 2023-24ನೇ ಸಾಲಿನ ಲೆಕ್ಕ ಶೀರ್ಷಿಕೆ:2404-00-191-1-17 ಹಾಲು



Scanned with CamScanner

ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದಡಿ SCSP ರಡಿ ರೂ.63.64 ಕೋಟಿಗಳು ಹಾಗೂ TSPರಡಿ
ರೂ36.36 ಕೋಟಿಗಳು ಒಟ್ಟಾರೆ ರೂ.100.00 ಕೋಟಿಗಳ ಅನುದಾನ ನಿಗದಿಯಾಗಿರುತ್ತದೆ.
ಮುಂದುವರೆದು, ಲೆಕ್ಕ ಶೀರ್ಷಿಕೆ:2404-00-191-1-17ರಡಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ
ಹೈನುಗಾರಿಕೆಗೆ ಸಹಾಯಧನ ಅನುದಾನ ಉಳಿಕೆಯಾದಲ್ಲಿ ಹಸು-ಎಮ್ಮೆ ಖರೀದಿಗೆ ಸಹಾಯಧನ
ನೀಡುವುದು ಎಂದು ಅನುಮೋದನೆಯಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಆಯುಕ್ತಾಲಯದ ಏಕಕಡತದಲ್ಲಿ, 2023-24ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ:2404-00-191-1-17 ರ ಉಪ ಶೀರ್ಷಿಕೆ:422 ರಲ್ಲಿ ರೂ.6363.64 ಲಕ್ಷಗಳು ಮತ್ತು ಉಪ ಶೀರ್ಷಿಕೆ:423 ರಲ್ಲಿ ರೂ.3636.36 ಲಕ್ಷಗಳಂತೆ ಒಟ್ಟು ರೂ.10000.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಇದರಲ್ಲಿ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯ ನಡುವಳಿ ಪ್ರಕಾರ 2023-24ನೇ ಸಾಲಿನ ಎಸ್.ಸಿ.ಪಿ /ಟಿ.ಎಸ್.ಪಿ ಕ್ರಿಯಾ ಯೋಜನೆಯಂತೆ ಹಾಲು ಪೂರೈಕೆದಾರರಿಗೆ ಪ್ರೋತ್ಸಾಹಧನ ಪಾವತಿ ನಂತರ ಉಪ ಶೀರ್ಷಿಕೆ:422 ರಡಿ ರೂ.5.00 ಕೋಟಿ ಹಾಗೂ ಉಪ ಶೀರ್ಷಿಕೆ:423 ರಡಿ ರೂ.5.00 ಕೋಟಿಗಳಂತೆ ಒಟ್ಟಾರೆ ರೂ.10.00 ಕೋಟಿ ಉಳಿಕೆಯಾಗಬಹುದೆಂದು ತಿಳಿಸುತ್ತಾ, ದಿನಾಂಕ:31.07.2023 ರಂದು ಮುಖ್ಯ ಮಂತ್ರಿಗಳು ಮತ್ತು ಅಧ್ಯಕ್ಷರು ರಾಜ್ಯ ಅನುಸೂಚಿತ ಜಾತಿಗಳ /ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ನಡೆದ 2023-24ನೇ ಸಾಲಿನ ಎಸ್.ಸಿ.ಪಿ / ಟಿ.ಎಸ್.ಪಿ ಕ್ರಿಯಾ ಯೋಜನೆಯ ವರದಿಯ ಕ್ರಮ ಸಂಖ್ಯೆ (8)ರಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಹೈನುಗಾರಿಕೆಗೆ ಸಹಾಯಧನ ಅನುದಾನ ಉಳಿಕೆಯಾದಲ್ಲಿ ಹಸು, ಎಮ್ಮೆ ಖರೀದಿಗೆ ಸಹಾಯಧನ ನೀಡುವುದು ಎಂದು ಅನುಮೋದನೆಯಾಗಿರುತ್ತದೆ. ಮುಂದುವರೆದು ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಕಾರ್ಯಕ್ರಮದಡಿ ಉಳಿಕೆಯಾಗಬಹುದಾದ ರೂ 10.00 ಕೋಟಿಗಳ ಅನುದಾನದಲ್ಲಿ ಕ್ರಿಯಾ ಯೋಜನೆ ಅನುಮೋದನೆ ವರದಿಯ ಕ್ರಮ ಸಂಖ್ಯೆ (8)ರಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಹೈನುಗಾರಿಕೆಗೆ ಸಹಾಯಧನ ಅನುದಾನ ಉಳಿಕೆಯಾದಲ್ಲಿ ಹಸು, ಎಮ್ಮೆ ಖರೀದಿಗೆ ಸಹಾಯಧನ ನೀಡುವುದರ ಪ್ರಕಾರ 2023-24 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಒಂದು ಮಿಶ್ರತಳಿ ಹಸು ಘಟಕ ಅನುಷ್ಠಾಗೊಳಿಸುವ ಯೋಜನೆಗೆ ವಿಸ್ತೃತ ಯೋಜನಾ ವರದಿ, ಜಿಲ್ಲಾವಾರು ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳ ವಿವರಗಳೊಂದಿಗೆ ಮಾರ್ಗಸೂಚಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 19 ಪಪಾಯೋ 2023 (ಭಾಗ-4), ಬೆಂಗಳೂರು, ದಿನಾಂಕ:10.11.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ದಿನಾಂಕ:31.07.2023 ರಂದು ನಡೆದ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದ ಕ್ರಿಯಾಯೋಜನೆಯಂತೆ, 2023-24ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2404-00-191-1-17 ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದಡಿ ಉಪ ಶೀರ್ಷಿಕೆ:422 ವಿಶೇಷ ಘಟಕ ಯೋಜನೆಯಡಿ

...3

Scanned with CamScanner

ರೂ.5.00 ಕೋಟಿ ಹಾಗೂ ಉಪ ಶೀರ್ಷಿಕೆ:423 ಗಿರಿಜನ ಉಪಯೋಜನೆಯಡಿ ರೂ.5.00 ಕೋಟಿ ಒಟ್ಟಾರೆ ಉಳಿತಾಯವಾಗುವ ರೂ.10.00 ಕೋಟಿಗಳ ಅನುದಾನದಲ್ಲಿ (ಹೈನುಗಾರಿಕೆ ಘಟಕ ಒಂದು ಮಿಶ್ರ ತಳಿ ಹಸು ಘಟಕದ ಮೊತ್ತ ರೂ.65000/-ಗಳಲ್ಲಿ ಸಹಾಯಧನ ಶೇ.90%ರಂತೆ ಒಂದು ಮಿಶ್ರ ತಳಿ ಹಸು ಘಟಕದ ಮೊತ್ತ ರೂ.58500/- ಗಳಂತೆ) ವಿಶೇಷ ಘಟಕ ಯೋಜನೆಯಡಿ- ಒಟ್ಟು 854 ಮಿಶ್ರ ತಳಿ ಹಸು ಘಟಕ ಹಾಗೂ ಗಿರಿಜನ ಉಪಯೋಜನ-ಒಟ್ಟು 854 ಮಿಶ್ರ ತಳಿ ಹಸು ಘಟಕ ಅನುಷ್ಠಾನಗೊಳಿಸುವ ಯೋಜನೆಗೆ ಅನುಮೋದನೆ ನೀಡುತ್ತಾ, ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳಿಗೆ ಅನುಮೋದನ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶರಣಬಸಪ್ಪ) 10/11/23
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನ)
10/11

ಗೆ:

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
7. ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
8. ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

**ಪ್ರತಿಗಳು:**

1. ಮಾನ್ಯ ಪಶುಸಂಗೋಪನ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಕಂಟ್ರೋಲ್ ರೂಂ ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned with CamScanner

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 19 ಪಪಾಯೋ 2023 (ಭಾಗ-4), ದಿನಾಂಕ:10.11.2023. ರ ಆದೇಶದಲ್ಲಿ 2023-24ನೇ ಸಾಲಿನ ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಳಿಕೆಯಾಗುವ ಅನುದಾನದಲ್ಲಿ ಅನುಷ್ಠಾನಗೊಳಿಸುವ ಒಂದು ಮಿಶ್ರ ತಳಿ ಹಸು ಘಟಕ ಯೋಜನೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಮಾರ್ಗಸೂಚಿಗಳು ಕೆಳಕಂಡಂತಿವೆ.

**I. ಯೋಜನಾ ವ್ಯಾಪ್ತಿ:**

ರಾಜ್ಯದಲ್ಲಿ 15511 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 2660878 ಸದಸ್ಯರಿರುತ್ತಾರೆ. ಇದರಲ್ಲಿ 2219905 ಸಾಮಾನ್ಯ ವರ್ಗ, **271022 ಪರಿಶಿಷ್ಟ ಜಾತಿ ಮತ್ತು 169951 ಪರಿಶಿಷ್ಟ ಪಂಗಡ**ದ ಸದಸ್ಯರಿರುತ್ತಾರೆ. 2023-24ನೇ ಸಾಲಿನಲ್ಲಿ 1157 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸುವ ಗುರಿ ಇದ್ದು, ಸೆಪ್ಟೆಂಬರ್ 2023ರ ಅಂತ್ಯಕ್ಕೆ 159 ಸಂಘಗಳನ್ನು ಸ್ಥಾಪಿಸಲಾಗಿದೆ. ಹಾಲು ಉತ್ಪಾದಕರ ಪ್ರೋತ್ಸಾಹಧನ ಯೋಜನೆಯಡಿ ಉಳಿತಾಯವಾಗಬಹುದಾದ ಅನುದಾನದಲ್ಲಿ ಒಂದು ಮಿಶ್ರತಳಿ ಹಸು ಘಟಕ ನೀಡುವ ಯೋಜನೆಗೆ ಫಲಾನುಭವಿಗಳನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳನ್ನು ರಾಜ್ಯದ 31 ಜಿಲ್ಲೆಗಳಲ್ಲಿ ಆಯ್ಕೆ ಮಾಡುವ ಮೂಲಕ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

**II. ಫಲಾನುಭವಿಗಳಿಗೆ ಸಂಬಂಧಿಸಿದ ಅನುಕೂಲಗಳು:**

- ಫಲಾನುಭವಿಯು ಸ್ವತ: ತಾನೇ ಅಥವಾ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಮತ್ತು ಇಲಾಖೆಯ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಅಲ್ಲಿಯ ಅಧಿಕಾರಿಗಳಿಗೆ ಅಗತ್ಯ ಇರುವ ಮಾಹಿತಿ ನೀಡಿ FRUITS ID (ಗುರುತಿನ ಸಂಖ್ಯೆ) ಪಡೆಯಬಹುದು. ಒಮ್ಮೆ ಈ ರೀತಿ ಪಡೆದ ಗುರುತಿನ ಸಂಖ್ಯೆಯು, ಶಾಶ್ವತ ಗುರುತಿನ ಸಂಖ್ಯೆಯಾಗಲಿದ್ದು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಸೇರಿದಂತೆ ಈ ಎಲ್ಲಾ ಇಲಾಖೆಗಳ ಸೌಲಭ್ಯ, ಸವಲತ್ತು ಪಡೆಯಲು ಬಳಸಬಹುದು.
- FRUITS ID (ಗುರುತಿನ ಸಂಖ್ಯೆ) ಪಡೆದ ನಂತರ ಫಲಾನುಭವಿಗಳಿಗೆ ಸಂಬಂಧಿಸಿದ ಜಾತಿ ಪ್ರಮಾಣ ಪತ್ರ, ಜಮೀನಿನ ವಿವರ, ಬಡತನ ರೇಖೆಗಿಂತ ಕೆಳಗಿರುವ ಬಗ್ಗೆ ದೃಢೀಕರಣ, ಫೋಟೋ ಮುಂತಾದ ದಾಖಲೆಗಳನ್ನು ಸಲ್ಲಿಸುವ ಅಗತ್ಯ ಇರುವುದಿಲ್ಲ.

III. <u>ಅರ್ಹತೆ:</u>

- ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಮತ್ತು ಆಸಕ್ತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರನ್ನು ಆಯ್ಕೆ ಮಾಡಲಾಗುವುದು.
- ಫಲಾನುಭವಿಗಳು ಕಡ್ಡಾಯವಾಗಿ FRUITS ID (ಗುರುತಿನ ಸಂಖ್ಯೆ) ಹೊಂದಿರಬೇಕು.
- ಆಯ್ಕೆಗೊಂಡ ಫಲಾನುಭವಿಗಳು ಕಡ್ಡಾಯವಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರಾಗಿರಬೇಕು ಅಥವಾ ಸದಸ್ಯತ್ವ ಕಡ್ಡಾಯವಾಗಿ ಪಡೆಯಬೇಕು.
- ಆಯ್ಕೆಗೊಂಡ ಫಲಾನುಭವಿ ಸ್ವತ್ತು ಪಡೆದ ನಂತರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಕಡ್ಡಾಯವಾಗಿ ಹಾಲು ಪೂರೈಸುವ ಷರತ್ತಿಗೆ ಒಳಪಟ್ಟು ಮುಚ್ಚಳಿಕೆಯನ್ನು ವ್ಯವಸ್ಥಾಪಕ ನಿರ್ದೇಶಕರು/ಪ್ರತಿನಿಧಿರವರಿಂದ ದೃಢೀಕರಿಸಿ ಸಲ್ಲಿಸುವುದು.



Scanned with CamScanner

- ಕಳೆದ 5 ವರ್ಷಗಳಲ್ಲಿ ಪಶುಪಾಲನಾ ಇಲಾಖೆಯಲ್ಲಿ ವಿವಿಧ ಯೋಜನೆಗಳಲ್ಲಿ ಹೈನುಗಾರಿಕೆಗೆ ಸಹಾಯಧನ ಸವಲತ್ತು ಪಡೆದಿರುವ ಕುಟುಂಬಗಳು ಈ ಯೋಜನೆಯ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ.

- ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ 33.3), ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳು RD No. ಇರುವ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.

- ಅರ್ಜಿದಾರರು FRUITS ತಂತ್ರಾಂಶದಲ್ಲಿ ನೋಂದಣಿ ಹೊಂದಿರ ಅರ್ಜಿದಾರರು FRUITS ತಂತ್ರಾಂಶದಲ್ಲಿ ನೋಂದಣಿ ಹೊಂದಿರಬೇಕು

## IV. <u>ಫಲಾನುಭವಿಯ ಆಯ್ಕೆ :</u>

ವಿಧಾನ ಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ರವರು ಪತ್ರಿಕಾ ಪ್ರಕಟಣೆ ಹಾಗೂ ಇತರೆ ಮಾಧ್ಯಮಗಳ ಮೂಲಕ ಸಾಕಷ್ಟು ಪ್ರಚಾರ ನೀಡಿ FRUITS ID (ಗುರುತಿನ ಸಂಖ್ಯೆ) ಹೊಂದಿರುವ ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡು ಕಡ್ಡಾಯವಾಗಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸದಸ್ಯತ್ವ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಂದ ಅರ್ಜಿ ಪಡೆದು, ಪಶುಲೋಕ ತಂತ್ರಾಂಶದಲ್ಲಿ ಇಂದೀಕರಿಸುವುದು.

ವಿಧಾನ ಸಭಾ ಕ್ಷೇತ್ರವಾರು ಕೆಳಕಂಡ ಫಲಾನುಭವಿ ಆಯ್ಕೆ ಹಾಗೂ ಮೇಲ್ವಿಚಾರಣೆ ಸಮಿತಿ ಮೂಲಕ ನಿಗದಿಪಡಿಸಿದ ಯೋಜನೆ, ಘಟಕ ಮತ್ತು ಗುರಿಗೆ ಅನುಗುಣವಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

| ಫಲಾನುಭವಿ ಆಯ್ಕೆ ಸಮಿತಿ ಹಾಗೂ ಮೇಲ್ವಿಚಾರಣೆ ಸಮಿತಿ | | |
|---|---|---|
| 1. | ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು | ಅಧ್ಯಕ್ಷರು |
| 2. | ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಶಾಸಕರು (ವಿಧಾನ ಪರಿಷತ್ತು) | ಸದಸ್ಯರು |
| 3. | ಉಪ ವ್ಯವಸ್ಥಾಪಕರು, ಸಂಬಂಧಿಸಿದ ಜಿಲ್ಲಾ ಹಾಲು ಒಕ್ಕೂಟ/ಪ್ರತಿನಿಧಿ | ಸದಸ್ಯರು |
| 4. | ಕಾರ್ಯನಿರ್ವಹಣಾ ಅಧಿಕಾರಿ,ತಾಲ್ಲೂಕು ಪಂಚಾಯತಿ | ಸದಸ್ಯರು |
| 5. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿ | ಸದಸ್ಯರು |
| 6. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ | ಸದಸ್ಯರು |
| 7. | ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ), ಪಶುಪಾಲನಾ ಇಲಾಖೆ | ಸದಸ್ಯ ಕಾರ್ಯದರ್ಶಿ |

..3

Scanned with CamScanner

V. **ಫಲಾನುಭವಿ ಆಯ್ಕೆ ಹಾಗೂ ಮೇಲ್ವಿಚಾರಣೆ ಸಮಿತಿ ಕರ್ತವ್ಯಗಳು :**

- ಫಲಾನುಭವಿಗಳನ್ನು ನಿರ್ಧಿಷ್ಟ ಸಮಯದಲ್ಲಿ ನಿಗದಿತ ಗುರಿಗಳನ್ವಯ ಆಯ್ಕೆ ಮಾಡುವುದು.
- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಲಹೆ ನೀಡುವುದು.
- ಗುಣಮಟ್ಟದ ಸ್ವತ್ತುಗಳನ್ನು ಖರೀದಿಸಲು ತಾಂತ್ರಿಕ ಸಲಹೆ ನೀಡುವುದು.
- ಆಯ್ಕೆಯಾದ ಫಲಾನುಭವಿಯು ನಿರಾಕರಿಸಿದ ಹಾಗೂ ಇನ್ನಿತರೆ ಸಂಧರ್ಭಗಳಲ್ಲಿ ಅನುದಾನ ವ್ಯಪಗತವಾಗದಂತೆ ಸಮರ್ಪಕವಾಗಿ ವೆಚ್ಚ ಮಾಡಲು ಪರ್ಯಾಯ ಫಲಾನುಭವಿಗಳನ್ನು ಹೆಚ್ಚುವರಿ ಪಟ್ಟಿಯಿಂದ ನಿಯಮಾನುಸಾರ ಆಯ್ಕೆ ಮಾಡಿ ಕಾರ್ಯಕ್ರಮವನ್ನು ನಿಗದಿತ ಸಮಯದಲ್ಲಿ ಅನುಷ್ಠಾನಗೊಳಿಸುವುದು.
- ರಾಸುಗಳನ್ನು ಫಲಾನುಭವಿಗಳಿಗೆ ನೀಡಿದ ನಂತರ ಸದರಿ ಮೇಲ್ವಿಚಾರಣೆ ಸಮಿತಿಯು ಸಭೆ ಸೇರಿ ಸ್ವತ್ತುಗಳು ಫಲಾನುಭವಿಗಳಿಗೆ ತಲುಪಿರುವ ಕುರಿತು ಖಾತರಿಪಡಿಸಿಕೊಳ್ಳತಕ್ಕದ್ದು.

VI. **ಸದಸ್ಯ ಕಾರ್ಯದರ್ಶಿ (ಮುಖ್ಯ ಪಶುವೈದ್ಯಾಧಿಕಾರಿಗಳು, ಆಡಳಿತ )ರವರ ಕರ್ತವ್ಯಗಳು :**

- ಪತ್ರಿಕಾ ಪ್ರಕಟಣೆ ಹಾಗೂ ಇತರೆ ಮಾಧ್ಯಮಗಳ ಮೂಲಕ ಸಾಕಷ್ಟು ಪ್ರಚಾರ ನೀಡಿ FRUITS ID (ಗುರುತಿನ ಸಂಖ್ಯೆ) ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಂದ ಅರ್ಜಿ ಪಡೆದು ಫಲಾನುಭವಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು, ಪಶುಲೋಕ ತಂತ್ರಾಂಶದಲ್ಲಿ ಇಂದೀಕರಿಸುವುದು.

- ಫಲಾನುಭವಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಧಾನಸಭಾ ಕ್ಷೇತ್ರಾವಾರು / ಜಿಲ್ಲಾವಾರು / ತಾಲ್ಲೂಕುವಾರು ಮಾಹಿತಿಗಳು ಲಭ್ಯವಿರುವಂತೆ ಇಂದೀಕರಿಸುವುದು.

- ಫಲಾನುಭವಿಗಳ ಆಯ್ಕೆ ನಂತರ ಸಂಬಂಧಿಸಿದ ಸ್ಥಳೀಯ ಪಶುವೈದ್ಯಾದಿಕಾರಿಗಳು ಯೋಜನೆಯನ್ನು ಅನುಷ್ಠಾನ ಮಾಡಲು ಕ್ರಮವಹಿಸುವುದು.

- ಪಶುಲೋಕ ಹಾಗೂ www.SCSPTSP.kar.nic.in ತಂತ್ರಾಂಶಗಳಲ್ಲಿ ಪ್ರಗತಿ ವರದಿಯನ್ನು ಕ್ರೋಢೀಕರಿಸುವುದು.

VII. **ಯೋಜನೆ ಅನುಷ್ಠಾನ :-**

- ರಾಜ್ಯ ಮಟ್ಟದಲ್ಲಿ ಲಭ್ಯವಿರುವ ಅನುದಾನ ಹಾಗೂ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾವಾರು ಆರ್ಥಿಕ ಹಾಗೂ ಭೌತಿಕ ಗುರಿಗಳನ್ನು ನಿಗದಿಪಡಿಸಲಾಗಿದೆ.

- ಉಪನಿರ್ದೇಶಕರು(ಆಡಳಿತ) ರವರು ತಾಲ್ಲೂಕುವಾರು ಮತ್ತು ಘಟಕವಾರು ಆಯಾ ತಾಲ್ಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಆರ್ಥಿಕ ಹಾಗೂ ಭೌತಿಕ ಗುರಿಗಳನ್ನು ಹಂಚಿಕೆ ಮಾಡುವುದು.

..4

Scanned with CamScanner

ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ರವರು ತಾಲ್ಲೂಕಿನ ವಿಧಾನಸಭಾ ಕ್ಷೇತ್ರವಾರು ಆರ್ಥಿಕ ಹಾಗೂ ಭೌತಿಕ ಗುರಿಗಳನ್ನು ನಿಗದಿಪಡಿಸುವುದು.

- ಫಲಾನುಭವಿಗಳನ್ನು ನಿಗದಿತ ಗುರಿಗಳಿಗೆ ಅನುಗುಣವಾಗಿ ಆಯ್ಕೆ ಸಮಿತಿಯ ಮೂಲಕ ವಿಧಾನ ಸಭಾ ಕ್ಷೇತ್ರವಾರು ಆಯ್ಕೆ ಮಾಡುವುದು.
- ಫಲಾನುಭವಿಗಳನ್ನು ಆಯ್ಕೆಗೊಳಿಸುವಾಗ ಮುಖ್ಯ ಮಂತ್ರಿಗಳ ಕಾರ್ಯಾಲಯ/ ಇಲಾಖಾ ಸಚಿವರಿಂದ/ ಇಲಾಖಾ & ಇತರ ಸಚಿವಾಲಯದಿಂದ/ ಆಯುಕ್ತಾಲಯದಿಂದ/ "ಜನಸ್ಪಂದನ" ಕೋಶದಿಂದ ಸ್ವೀಕರಿಸಿರುವ ಅರ್ಜಿಗಳನ್ನು ಸಹಾ ಫಲಾನುಭವಿಗಳ ಆಯ್ಕೆ ವೇಳೆ ಪರಿಗಣಿಸುವುದು.
- ಜಿಲ್ಲಾ ಉಪ ನಿರ್ದೇಶಕರುಗಳು ವಿಧಾನಸಭಾ ಕ್ಷೇತ್ರವಾರು ನಿಗದಿಯಾದ ಗುರಿಗಳನ್ನು ತಾಲ್ಲೂಕು ಸಹಾಯಕ ನಿರ್ದೇಶಕರು/ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಇವರಿಂದ ಪಡೆದು, ಲೀಡ್ ಬ್ಯಾಂಕ್ ಮುಖಾಂತರ ತಾಲ್ಲೂಕುವಾರು ಬ್ಯಾಂಕ್‌ಗಳ ಗುರಿ ನಿಗದಿಪಡಿಸಲು ಕ್ರಮ ವಹಿಸುವುದು.
- ಫಲಾನುಭವಿಗಳಿಂದ ವಂತಿಗೆ ಸ್ವೀಕರಿಸುವಂತಹ ಯೋಜನೆಗಳನ್ನು ವಂತಿಗೆ ಹಣವನ್ನು ಫಲಾನುಭಾವಿಗಳಿಂದ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿ, ನಂತರ ಸಹಾಯಧನವನ್ನು ಅದೇ ಖಾತೆಗೆ ಜಮಾ ಮಾಡಿ ಸ್ವತ್ತನ್ನು ಮಾರಾಟ ಮಾಡಿರುವವರಿಗೆ ಪಾವತಿಸುವಂತೆ ಅನುಷ್ಠಾನಾಧಿಕಾರಿಗಳು ಕಾರ್ಯಗತಗೊಳಿಸುವುದು.
- ಸಹಾಯಕ ನಿರ್ದೇಶಕರು ವಿಳಂಬವಿಲ್ಲದೇ ಆಯ್ಕೆಯಾದ ಫಲಾನುಭವಿಗಳ ಅರ್ಜಿಯನ್ನು ದಾಖಲೆಗಳೊಂದಿಗೆ ಸಂಬಂಧಿಸಿದ ಪಶುವೈದ್ಯಾಧಿಕಾರಿಗಳ ಮುಖಾಂತರ ಸಾಲ ಮಂಜೂರಾತಿಗಾಗಿ ಬ್ಯಾಂಕ್‌ಗಳಿಗೆ ಸಲ್ಲಿಸುವುದು ಹಾಗೂ ಈ ಬಗ್ಗೆ ಪಶುಲೋಕ ತಂತ್ರಾಂಶದಲ್ಲಿ ನಮೂದಿಸುವುದು.
- ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಪಶುವೈದ್ಯಾಧಿಕಾರಿಗಳು ಸಂಬಂಧಿಸಿದ ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಪತ್ರ ಪಡೆದು ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.
- ಈ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು, ವಾಣಿಜ್ಯ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳ ಮುಖಾಂತರವು ಸಹ ಸಾಲ ಮಂಜೂರಾತಿಯೊಂದಿಗೆ ಅನುಷ್ಠಾನಗೊಳಿಸುವುದು.
- ಸಹಾಯಕ ನಿರ್ದೇಶಕರು ಅಥವಾ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಸಹಾಯಧನವನ್ನು ಆಯಾ ಬ್ಯಾಂಕ್‌ಗಳಿಗೆ ಬಿಡುಗಡೆಗೊಳಿಸಿ ಯೋಜನೆ ಅನುಷ್ಠಾನಗೊಳಿಸುವುದು.
- ಆಯ್ಕೆಗೊಂಡ ಫಲಾನುಭವಿಗಳ ರಾಸುಗಳಿಗೆ ಯುಐಡಿ ಸಂಖ್ಯೆ ಇರುವ ಟ್ಯಾಗ್‌ಗಳನ್ನು ಅಳವಡಿಸಿ, ಫಲಾನುಭವಿ, ಮಾರಾಟಗಾರ, ಬ್ಯಾಂಕ್ ಪ್ರತಿನಿಧಿ ಮತ್ತು ಅನುಷ್ಠಾನಾಧಿಕಾರಿ ಸ್ವತ್ತಿನೊಂದಿಗೆ ಇರುವ ಫೋಟೋವನ್ನು "ಪಶುಲೋಕ ತಂತ್ರಾಂಶದಲ್ಲಿ" ಎಲ್ಲಾ ವಿವರಗಳೊಂದಿಗೆ ದಾಖಲಿಸುವುದು.

..5

Scanned with CamScanner

- ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ದನದ ಕೊಟ್ಟಿಗೆ ನಿರ್ಮಾಣಕ್ಕಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ(MGNREGA)ಯೋಜನೆಯಡಿ ಅವಕಾಶ ಕಲ್ಪಿಸಲು ಸ್ಥಳೀಯ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳಿಗೆ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ನೀಡುವುದು.

- ಕಳೆದ 5 ವರ್ಷಗಳಲ್ಲಿ ಪಶುಪಾಲನಾ ಇಲಾಖೆಯಲ್ಲಿ ವಿವಿಧ ಯೋಜನೆಗಳಲ್ಲಿ ಹೈನುಗಾರಿಕೆಗೆ ಸಹಾಯಧನ ಸವಲತ್ತು ಪಡೆದಿರುವ ಕುಟುಂಬಗಳು ಮತ್ತೆ ಈ ಯೋಜನೆಯ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ.

- ಈ ಯೋಜನೆಯಡಿಯ ಫಲಾನುಭವಿಗಳ ಸ್ವತ್ತುಗಳನ್ನು ವಿಮೆಗೊಳಪಡಿಸಲು ಕ್ರಮ ವಹಿಸುವುದು.

- ಆಯ್ಕೆಯಾದ ಫಲಾನುಭವಿಯು ಯೋಜನೆಯ ಅನುಷ್ಠಾನಕ್ಕೆ ಮೊದಲು ಮರಣ ಹೊಂದಿದಲ್ಲಿ ಅವರ ಅಧಿಕೃತ ವಾರಸುದಾರರಿಗೆ ಈ ಯೋಜನೆಯ ಸವಲತ್ತನ್ನು ನೀಡಲು ಕ್ರಮ ವಹಿಸುವುದು.

- ಅನುಷ್ಠಾನಗೊಳಿಸಿದ ಕೂಡಲೇ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಪ್ರಗತಿ ವಿವರಗಳನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ತಪ್ಪದೇ ಕ್ರಮ ವಹಿಸುವುದು.

**ಮುಖ್ಯ ಪಶುವೈದ್ಯಾಧಿಕಾರಿಗಳು(ಆಡಳಿತ)**:

ಸ್ಥಳೀಯ ಅಧಿಕಾರಿಗಳಾದ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಅಥವಾ ಪಶುವೈದ್ಯಾಧಿಕಾರಿಗಳು ಯೋಜನೆಯ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ ಮತ್ತು ಈ ಕೆಳಗಿನ ಎಲ್ಲ ದಾಖಲೆ ಪತ್ರಗಳ ಮೂಲ ಪ್ರತಿಗಳನ್ನು ನಿರ್ವಹಿಸುವುದು ಅವರ ಜವಾಬ್ದಾರಿ ಆಗಿರುತ್ತದೆ.

1) ಸಾಲ ಮಂಜೂರಾತಿ ಪತ್ರ
2) FRUITS ID ದೃಢೀಕರಣ ಪತ್ರ.
3) ಫಲಾನುಭವಿಯ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸದಸ್ಯತ್ವ ಹೊಂದಿರುವ ದಾಖಲಾತಿಯ ಪ್ರತಿ.
4) ಫಲಾನುಭವಿಯಿಂದ ಸಹಾಯಧನ ಸ್ವೀಕೃತಿ ಪತ್ರ
5) ಫಲಾನುಭವಿಯೊಂದಿಗೆ ರಾಸುವಿನ ಭಾವಚಿತ್ರ-3 ವಿವಿಧ ಕೋನಗಳಲ್ಲಿ.
6) ಸ್ವತ್ತು ಖರೀದಿ ನಗದು ರಸೀದಿ
7) ಜಾನುವಾರು ಆರೋಗ್ಯ ದೃಢೀಕರಣ ಪತ್ರ, ವಿಮಾ ಪಾಲಿಸಿ,
8) ಫಲಾನುಭವಿಗಳ ಆಧಾರ್ ಕಾರ್ಡ್ ಪ್ರತಿ.
9) ಇತರೆ ದಾಖಲಾತಿಗಳು

**VIII. ಸಹಾಯಧನ ಸೆಳೆಯುವ ವಿಧಾನ :**

- ಅನುಷ್ಠಾನಾಧಿಕಾರಿಗಳು ಸಾದಿಲ್ವಾರು ಬಿಲ್ಲುಗಳನ್ನು ರಾಜ್ಯವಲಯದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕೆ-2 ಮುಖಾಂತರ ತಯಾರಿಸಿ ಮೇಲು ರುಜುವಿಗಾಗಿ ಉಪ ನಿರ್ದೇಶಕರಿಗೆ ಸಲ್ಲಿಸುವುದು.

[signature]



Scanned with CamScanner

- ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಆಯ್ಕೆಯಾದ ಫಲಾನುಭವಿಗಳ ಪಟ್ಟಿಯೊಂದಿಗೆ ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಬಗ್ಗೆ ಒಪ್ಪಿಗೆ ಪತ್ರ/ಫಲಾನುಭವಿಗಳ ವಂತಿಕೆ ಭರಿಸಿರುವ ಕುರಿತು ದಾಖಲಾತಿಗಳೊಂದಿಗೆ ಉಪ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ಸಹಾಯಧನವನ್ನು ಫಲಾನುಭವಿಗಳ ಖಾತೆಗೆ ಜಮೆ ಮಾಡುವ ಮುನ್ನ, ಸದರಿ ಸಹಾಯಧನವನ್ನು ಯೋಜನೆ ಅನುಷ್ಠಾನಗೊಳಿಸುವವರಗೆ **"Hold Balance"** ನಲ್ಲಿ ಇರಿಸುವಂತೆ ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಅನುಷ್ಠಾನಾಧಿಕಾರಿಗಳು ಲಿಖಿತ ವಿನಂತಿ ನೀಡುವುದು. ಇದನ್ನು ಜಿಲ್ಲಾ ಉಪ ನಿರ್ದೇಶಕರುಗಳು ಖಾತ್ರಿ ಪಡಿಸಿಕೊಳ್ಳುವುದು.
- ಸಂಬಂಧಿಸಿದ ಫಲಾನುಭವಿಗಳ ಖಾತೆಗೆ ಸಹಾಯಧನ ಜಮೆ ಮಾಡುವ ಮುನ್ನ ಸಹಾಯಧನವನ್ನು ಯೋಜನೆ ಅನುಷ್ಠಾನಕ್ಕಲ್ಲದೇ ಬೇರೆ ಯಾವುದೇ ಕಾರಣಕ್ಕೂ ಸೆಳೆಯದಿರುವ ಬಗ್ಗೆ ಹಾಗೂ ಸಂಬಂಧಿಸಿದ ಖಾತೆಯಲ್ಲಿ Hold Balance ಇರಿಸುವಂತೆ ಫಲಾನುಭವಿಯು ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಲಿಖಿತ ಮೂಲಕ ವಿನಂತಿಸುತ್ತಾ ಸಲ್ಲಿಸಿರುವುದರ ಪತ್ರದ ಪ್ರತಿಯನ್ನು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ಉಪ ನಿರ್ದೇಶಕರು ಸಹಾಯಧನವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ **"DBT"** ಮುಖಾಂತರ ವರ್ಗಾಯಿಸುವುದು.
- ಸಹಾಯಧನವನ್ನು DBT ಮಾಡಿದ ನಂತರ ಅನುಷ್ಠಾನಾಧಿಕಾರಿಗಳು ಸಹಾಯಧನ ಮತ್ತು ಬ್ಯಾಂಕ್ ಸಾಲ/ಫಲಾನುಭವಿಗಳ ವಂತಿಕೆ ಕ್ರೋಢೀಕರಿಸಿ ಸ್ವತ್ತನ್ನು ಖರೀದಿಸಿ ಒಂದು ಮಿಶ್ರತಳಿ ಹಸು ಘಟಕ ಫಲಾನುಭವಿಗಳಿಗೆ ವಿತರಿಸುವುದು.
- ಫಲಾನುಭವಿ ಆಯ್ಕೆಯಾಗಿರುವ ಬಗ್ಗೆ ಸಮಿತಿಯಿಂದ ಅನುಮೋದಿಸಿದ ಸದಸ್ಯರುಗಳ ಸಹಿಯೊಂದಿಗೆ ಪಟ್ಟಿಯನ್ನು ಪಶುಲೋಕ ತಂತ್ರಾಂಶದಲ್ಲಿ ಮುಖ್ಯ ಪಶುವೈದ್ಯಾಧಿಕಾರಿಗಳು(ಆಡಳಿತ) ರವರು ಸಮೀಕರಿಸುವುದು.
- FRUITS ID ಇರುವ ದೃಢೀಕರಣ ಪತ್ರ
- ಫಲಾನುಭವಿಯ ಭಾವಚಿತ್ರ.
- ಫಲಾನುಭವಿಯ ಕುಟುಂಬ ಈ ಹಿಂದೆ ಇಲಾಖೆಯಿಂದ ಸಹಾಯ ಪಡೆಯದಿರುವ ಬಗ್ಗೆ ದೃಢೀಕರಣ ಪತ್ರ.
- ಬ್ಯಾಂಕ್‌ಗಳಿಂದ ಸಾಲ ಮಂಜೂರಾತಿ ಬಗ್ಗೆ ಒಪ್ಪಿಗೆ ಪತ್ರ (ನಿಗದಿತ ನಮೂನೆಯಲ್ಲಿ) ಪಡೆಯುವುದು.
- ಫಲಾನುಭವಿಯಿಂದ ಸಹಾಯಧನ ಪಡೆದಿರುವ ಬಗ್ಗೆ ಮುಂಗಡ ರಶೀದಿ (ತ್ರಿಪ್ರತಿಯಲ್ಲಿ)

## IX. ಸ್ವತ್ತು ಖರೀದಿ ಸಮಿತಿ :

| | |
|---|---|
| 1) | ಫಲಾನುಭವಿಯ ಗ್ರಾಮ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಾದ ಸ್ಥಳೀಯ ಮುಖ್ಯ ಪಶುವೈದ್ಯಾಧಿಕಾರಿಗಳು(ಆಡಳಿತ) |
| 2) | ಪ್ರತಿ ನಿಧಿ, ಜಿಲ್ಲಾ ಹಾಲು ಒಕ್ಕೂಟ |
| 3) | ಬ್ಯಾಂಕ್ ಅಧಿಕಾರಿ/ಪ್ರತಿನಿಧಿ (ಬ್ಯಾಂಕುಗಳಿಂದ ಸಾಲ ಪಡೆದ ಯೋಜನೆಗಳಿಗೆ ಮಾತ್ರ) |
| 4) | ಫಲಾನುಭವಿ. |
| 5) | ಮಾರಾಟಗಾರ. |

..7

Scanned with CamScanner

| | |
|---|---|
| **XI.** | **ಯೋಜನೆ ಮೇಲ್ವಿಚಾರಣೆ :** |
| 1) | ಅನುಷ್ಠಾನಾಧಿಕಾರಿಗಳು ಸ್ವತ್ತು ಖರೀದಿ ಸಮಿತಿ ಮೂಲಕ ರಾಸುಗಳನ್ನು ಖರೀದಿ ಮಾಡುವುದು. |
| 2) | ಅನುಷ್ಠಾನಾಧಿಕಾರಿಗಳು ಸಂಬಂಧಿಸಿದ ಮೂಲ ದಾಖಲೆ ಪತ್ರಗಳನ್ನು ತಮ್ಮ ಕಛೇರಿಯಲ್ಲಿ ನಿರ್ವಹಣೆ ಮಾಡುವುದು. |
| 3) | ಅನುಷ್ಠಾನಾಧಿಕಾರಿಗಳು ಯೋಜನೆಯಲ್ಲಿ ನೀಡಿದ ರಾಸುಗಳನ್ನು ಆರೋಗ್ಯ ರಕ್ಷಣೆ, ಲಸಿಕೆ ಕಾರ್ಯಕ್ರಮ ಕೈಗೊಳ್ಳುವುದು. |
| 4) | ವಿತರಿಸಿದ ಸ್ವತ್ತುಗಳ ಅನುಪಾಲನೆ ವಹಿ (Asset register) ನಿರ್ವಹಿಸುವುದು. |
| 5) | ಅನುಷ್ಠಾನಾಧಿಕಾರಿಗಳು ಹಣ ವಿನಿಯೋಗ ದೃಢೀಕರಣ ಪತ್ರಗಳನ್ನು ಬ್ಯಾಂಕ್ ಗಳಿಂದ ಪಡೆದು, ದೃಢೀಕರಿಸಿ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ರವರ ಮೂಲಕ ಉಪ ನಿರ್ದೇಶಕರಿಗೆ ಸಲ್ಲಿಸುವುದು. |
| 6) | ಉಪ ನಿರ್ದೇಶಕರುಗಳು ಯೋಜನೆಯ ಅನುಷ್ಠಾನದ ಬಗ್ಗೆ ಹಾಗೂ ಯೋಜನೆಯ ಅನುಸರಣೆ/ಪ್ರಗತಿಯ ಬಗ್ಗೆ ಕಾಲಕಾಲಕ್ಕೆ ವರದಿ ಪಶುಲೋಕ ತಂತ್ರಾಂಶದಲ್ಲಿ ಸಲ್ಲಿಸುವುದು. |
| 7) | ಜಿಲ್ಲೆಯ ಉಪ ನಿರ್ದೇಶಕರು ಅನುಷ್ಠಾನಗೊಂಡ ಯೋಜನೆಯ ಪ್ರತಿ ತಾಲ್ಲೂಕಿನ ಕನಿಷ್ಠ ಶೇ.2 ರಷ್ಟು ಹಾಗೂ ತಾಲ್ಲೂಕು ಸಹಾಯಕ ನಿರ್ದೇಶಕರು ಶೇ.5 ರಷ್ಟು ಫಲಾನುಭವಿಗಳ ಮನೆಗ ಭೇಟಿ ನೀಡಿ ಅನುಷ್ಠಾನದ ಮತ್ತು ಸ್ವತ್ತನ್ನು ನಿರ್ವಹಿಸಿರುವ ಬಗ್ಗೆ ಪರಿಶೀಲಿಸಿ ಮಾಡಬೇಕು. |
| 8) | ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮ ಅನುಷ್ಠಾನಗೊಂಡ ನಂತರ ಕನಿಷ್ಠ ಪ್ರತಿ ಮಾಹೆ ಒಮ್ಮೆ ಖುದ್ದು ಭೇಟಿ ನೀಡಿ ಸ್ವತ್ತು ಪರಿಶೀಲನೆ ಮಾಡಿ ಪಶುಭಾಗ್ಯ ತಂತ್ರಾಂಶದಲ್ಲಿ ಮಾಹಿತಿ ದಾಖಲಿಸುವುದು ಮತ್ತು ಈ ಕುರಿತು ಸ್ವತ್ತು ಅನುಸರಣೆ ವಹಿಯಲ್ಲಿ ನಮೂದಿಸುವುದು. |
| **XII.** | **ಕ್ರಮಗಳು :** |
| 1. | ಸ್ವತ್ತುಗಳನ್ನು (ಮಿಶ್ರ ತಳಿ ಹಸು ಘಟಕ) ಕಡ್ಡಾಯವಾಗಿ ಹೊರ ರಾಜ್ಯದಿಂದ ಅಥವಾ ಕನಿಷ್ಠ 100 ಕಿ .ಮೀ ಪರಿಮಿತಿಯ ಹೊರಗಿನಿಂದ ಖರೀದಿಸತಕ್ಕದ್ದು. |
| 2. | ಸ್ವತ್ತು ಖರೀದಿ ಸಮಯದಲ್ಲಿ ಆಯಾ ಪ್ರದೇಶಕ್ಕೆ ಸೂಕ್ತವಾದ ತಳಿಯನ್ನು ಖರೀದಿಸಲು ಆದ್ಯತೆ ನೀಡುವುದು. |
| 3. | ತುಂಬು ಗರ್ಭದಿಂದಿರುವ ಅಥವಾ ಇತ್ತೀಚೆಗೆ ಕರು ಹಾಕಿದ (Recently Calved) ದಿನಕ್ಕೆ 8 ರಿಂದ 10 ಲೀಟರ್ ಹಾಲು ನೀಡುವ ಸಾಮರ್ಥ್ಯ ಇರುವ ಒಂದು ಮಿಶ್ರ ತಳಿ ಹಸು ಖರೀದಿ ಮಾಡುವುದು. |
| 4. | ಮಿಶ್ರ ತಳಿ ರಾಸುಗಳನ್ನು ಖರೀದಿ ಸ್ಥಳದಿಂದ ಫಲಾನುಭವಿಯ ಕೊಟ್ಟಿಗೆಯವರೆಗೆ ಸಾಗಾಣಿಕೆ ಮಾಡಲು ಮತ್ತು ಆಹಾರದ ವೆಚ್ಚವನ್ನು ಫಲಾನುಭವಿಯ ಸ್ವಂತ ಖರ್ಚಿನಿಂದ ಭರಿಸುವುದು. |
| 5. | ಖರೀದಿಸಿದ ರಾಸುಗಳಿಗೆ 12 ಅಂಕಿಯ ಪಶು ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ INAPH ತಂತ್ರಾಂಶದಲ್ಲಿ ನಮೂದಿಸುವುದು ಹಾಗೂ ಖರೀದಿಸಿದ ರಾಸುಗಳಿಂದ ಜನ್ಮ ತಾಳುವ ಕರುಗಳ ಮಾಹಿತಿಯನ್ನು INAPH ತಂತ್ರಾಂಶದಲ್ಲಿ ನಮೂದಿಸುವುದು. |
| 6. | ಆಯ್ಕೆಯಾದ ಫಲಾನುಭವಿಗಳ ವಿವರವನ್ನು www.SCSPTSP.kar.nic.in ಹಾಗೂ ಪಶುಲೋಕ ತಂತ್ರಾಂಶಗಳಲ್ಲಿ ನಮೂದಿಸುವುದು. |

| | |
|---|---|
| 7. | ಅನುಬಂಧ-2 ರಂತೆ ಫಲಾನುಭವಿಗಳ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರು ತಮ್ಮ ವ್ಯಾಪ್ತಿಯ ತಾಲ್ಲೂಕುಗಳ ಫಲಾನುಭವಿಗಳ ಮಾಹಿತಿಯನ್ನು ಕ್ರೋಢೀಕರಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು. |
| 8. | ವಿವಿಧ ಯೋಜನೆಗಳಲ್ಲಿ ಬರುವ ಘಟಕದಲ್ಲಿರುವಂತೆ ರಾಸುಗಳನ್ನು ಖರೀದಿಸಿ, ಮೂರು ವರ್ಷದ ವಿಮೆ ಕಡ್ಡಾಯವಾಗಿ ಮಾಡಿಸುವುದು |

| XIII | **ಘಟಕ ವಿವರ:**<br>**ಒಂದು ಮಿಶ್ರ ತಳಿ ಹಸು** | | **(ಮೊತ್ತ ರೂ.ಗಳಲ್ಲಿ)** | |
|---|---|---|---|---|
| **ಕ್ರ ಸಂ** | **ಘಟಕದ ವಿವರ** | **ಘಟಕದ ಮೊತ್ತ** | **ಸಹಾಯಧನ** | |
| | | | **ಪರಿಶಿಷ್ಟ ಜಾತಿ (ಶೇ.90%)** | **ಪರಿಶಿಷ್ಟ ಪಂಗಡ (ಶೇ.90%)** |
| 1. | ಹೈನುಗಾರಿಕೆ ಘಟಕ<br>ಒಂದು ಮಿಶ್ರ ತಳಿ ಹಸು | 65,000 | 58,500 | 58,500 |

| **ಕ್ರ. ಸಂ** | **ವಿವರ:** | **ಮೊತ್ತ ರೂ.ಗಳಲ್ಲಿ** |
|---|---|---|
| 1 | ಒಂದು ಮಿಶ್ರ ತಳಿ ಹಾಲು ಕರೆಯುವ ಹಸು | 58,000 |
| 2 | ಜಾನುವಾರು ವಿಮೆ ಮೊತ್ತ (ಮೂರು ವರ್ಷಕ್ಕೆ) | 7,000 |
| 3 | ಸಾಗಾಣಿಕೆ ವೆಚ್ಚ (ಗರಿಷ್ಠ) ಮತ್ತು ಇತರ | ಸ್ವಂತ |
| 4 | ಪಶು ಆಹಾರ ಮತ್ತು ಲವಣ ಮಿಶ್ರಣ ವೆಚ್ಚ | ಸ್ವಂತ |
| | **ಒಟ್ಟು :** | **65,000** |

**ಘಟಕದ ವಿವರ:**

ಮಿಶ್ರ ತಳಿ ಹಸುವಿನ ಹಾಲಿನ ಇಳುವರಿ(8-10ಲೀ) ಗಳಿಗೆ ಪರಿಗಣಿಸಲಾಗಿದ್ದು, ಆಹಾರದ ಮತ್ತು ಸಾಗಾಣಿಕೆ ವೆಚ್ಚವನ್ನು ಫಲಾನುಭವಿಯ ಸ್ವಂತ ಖರ್ಚಿನಿಂದ ಭರಿಸುವುದು ಘಟಕದ ಸಹಾಯಧನ ಹೊರತುಪಡಿಸಿದಂತೆ ಉಳಿದ ಮೊತ್ತ **ಶೇಕಡ 10** ರೂ.6500/-ಗಳನ್ನು ಫಲಾನುಭವಿಗಳ ವಂತಿಕೆ ಅಥವಾ ಸಾಲದ ರೂಪದಲ್ಲಿ ಬ್ಯಾಂಕಿನಿಂದ ಪಡೆಯುವುದು.

**ಕಾರ್ಯಕ್ರಮ:**

1) ವಿಶೇಷ ಘಟಕ ಯೋಜನೆ –1 ಮಿಶ್ರ ತಳಿ ಹಸು ಘಟಕ
2) ಗಿರಿಜನ ಉಪಯೋಜನೆ –1 ಮಿಶ್ರ ತಳಿ ಹಸು ಘಟಕ



Scanned with CamScanner

**ಅನುದಾನ** :

- 2404-00-191-1-17 ಹಾಲು ಉತ್ಪಾದಕರಿಗೆ ಉತ್ತೇಜನ

(1) ಲೆಕ್ಕ ಶೀರ್ಷಿಕೆ 422- ರೂ.5.00 ಕೋಟಿ
(2) ಲೆಕ್ಕ ಶೀರ್ಷಿಕೆ 423 –ರೂ.5.00 ಕೋಟಿ

**ಒಟ್ಟು ರೂ.10.00 ಕೋಟಿ**

10/11/23
**(ಶರಣಬಸಪ್ಪ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)
10/11

Scanned with CamScanner

# 2024-25ನೇ ಸಾಲಿನ SCSP / TSP ಕಾರ್ಯಕ್ರಮಗಳ ಕ್ರಿಯಾ ಯೋಜನೆ
## Scheme-wise Outlay on SCSP/TSP -2024-25
## ಇಲಾಖೆ: ಪಶುಸಂಗೋಪನೆ- ANIMAL HUSBANDRY

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ Scheme & HOA | ನಿಗದಿಪಡಿಸಿದ ಅನುದಾನ Outlay | | | ಯೋಜನೆ / ಕಾರ್ಯಕ್ರಮದ ವಿವರ Scheme / Programme Details ಇಲಾಖೆಯ ಪ್ರಸ್ತಾವನೆಗಳು | ನೋಡಲ್ ಏಜೆನ್ಸಿ ಶಿಫಾರಸ್ಸು Recommendations of Nodal Agency | ರಾಜ್ಯ ಪ.ಜಾತಿ / ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯ Decision of the State SC/ST Development Council |
|---|---|---|---|---|---|---|---|
| | | SCSP | TSP | Grand Total SCSP + TSP | | | |
| **STATE SECTOR SCHEMES (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ)** | | | | | | | |
| 1 | ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ನಿರ್ದೇಶಕರು Director Animal Husbandry & Veterinary Services 2403 00-001-0-01 | 0.62 | 0.25 | 0.87 | ರಾಜ್ಯ ವಲಯದಡಿ ಕಾರ್ಯನಿರ್ವಹಿಸುತ್ತಿರುವ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಮೂರು ಸ್ಪೆಷಾಲಿಟಿ ಆಸ್ಪತ್ರೆಗಳು ಮತ್ತು 27 ಪಶುವೈದ್ಯ ಪಾಲಿಕ್ಲಿನಿಕ್ ಗಳಿಗೆ ಹಾಗೂ ಇತರೆ ಪಶುವೈದ್ಯ ಸಂಸ್ಥೆಗಳಿಗೆ ಪ.ಜಾತಿ ಮತ್ತು ಪ.ಪಂಗಡದ ರೈತರ ಜಾನುವಾರುಗಳ ಚಿಕಿತ್ಸೆಗಾಗಿ ಅವಶ್ಯವಿರುವ ಔಷಧಿ ಮತ್ತು ರಾಸಾಯನಿಕಗಳನ್ನು ಪೂರೈಸುವುದು. | ಅನುಮೋದಿಸಬಹುದು. | ಅನುಮೋದಿಸಿದೆ |
| 2 | ಕೇ.ಪು.ಯೋ ರಾಜ್ಯದ ಪಾಲು - ಜಾನುವಾರು ರೋಗಗಳ ನಿಯಂತ್ರಣ CSS- State Share Control of Animal Diseases 2403 00-101-0-21 | 2.28 | 0.93 | 3.22 | ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಆಸ್ಕಾಡ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತುರ್ತು ಔಷಧಿ, ಜಂತು ನಾಶಕ ಔಷಧಿ, ಸಿರಿಂಜ್ ಮತ್ತು ನೀಡಲ್ಸ್, ವಿವಿಧ ಲಸಿಕೆಗಳ ಖರೀದಿ, ಆಸ್ಪತ್ರೆಗೆ ಬೇಕಾಗುವ ಉಪಕರಣಗಳ ಖರೀದಿ,, ಹಾಗೂ ಅವಶ್ಯವಿರುವ ಪ್ರಚಾರ ಸಾಮಗ್ರಿಗಳ ಜಾಹೀರಾತು ವೆಚ್ಚ ಮತ್ತು ಇತರೆ ಸಾಂದರ್ಭಿಕ ವೆಚ್ಚಗಳನ್ನು ಪಾವತಿಸಲು | ಅನುಮೋದಿಸಬಹುದು. | ಅನುಮೋದಿಸಿದೆ |
| 3 | ಕೇ.ಪು.ಯೋ- ಕೇಂದ್ರದ ಪಾಲು ಜಾನುವಾರು ರೋಗಗಳ ನಿಯಂತ್ರಣ CSS- Central Share Control of Animal Diseases 2403-00-101-0-42 | 3.43 | 1.40 | 4.83 | | | |

(ಕಲಾವತಿ ಎಸ್.ವಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ Scheme & HOA | ನಿಗದಿಪಡಿಸಿದ ಅನುದಾನ Outlay SCSP | TSP | Grand Total SCSP + TSP | ಯೋಜನೆ / ಕಾರ್ಯಕ್ರಮದ ವಿವರ Scheme / Programme Details ಇಲಾಖೆಯ ಪ್ರಸ್ತಾವನೆಗಳು | ನೋಡಲ್ ಏಜೆನ್ಸಿ ಶಿಫಾರಸ್ಸು Recommendations of Nodal Agency | ರಾಜ್ಯ ಪ.ಜಾತಿ / ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯ Decision of the State SC/ST Development Council |
|---|---|---|---|---|---|---|---|
| 4 | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ Karnataka Sheep and Wool Devlopment Corporation Limited (S S) 2403 00 104 0 02 | 3.71 | 1 51 | 5.22 | ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ (20+1 ಕುರಿ/ಮೇಕೆ ಘಟಕದಂತೆ) 847 ಪ.ಜಾತಿಯ ಮತ್ತು 345 ಪ.ಪಂಗಡದ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಿ ಅನುಷ್ಠಾನಗೊಳಿಸುವುದು. | ಅನುಮೋದಿಸಬಹುದು. | ಅನುಮೋದಿಸಿದೆ |
| 5. | ಕೇ.ಪ್ರ.ಯೋ-ಕೇಂದ್ರದ ಪಾಲು-ಜಾನುವಾರು ಮತ್ತು ಕೋಳಿ ತಳಿಗಳ ಅಭಿವೃದ್ಧಿ ಉಪಯೋಜನೆ ಹಾಗೂ ಸೆಮಿನಾರ್ ಗಳು (ರಾ.ಜಾ.ಮಿ) CSS-Central Share- Sub-Mission on Breed Development of Livestock & Poultry and Seminars(NLM) 2403 00 106 0 03 | 0.06 | 0.03 | 0.09 | | | |
| 6 | ಕೇ.ಪ್ರ.ಯೋ-ರಾಜ್ಯದ ಪಾಲು ಜಾನುವಾರು ಮತ್ತು ಕೋಳಿ ತಳಿಗಳ ಅಭಿವೃದ್ಧಿ ಉಪಯೋಜನೆ ಹಾಗೂ ಸೆಮಿನಾರ್ ಗಳು (ರಾ.ಜಾ.ಮಿ) CSS-State Share-Sub-Mission on Breed Development of Livestock & Poultry and Seminars(NLM) 2403 00 106 0 04 | 0.01 | 0.01 | 0.02 | ಜಾನುವಾರು ಮತ್ತು ಕೋಳಿ ತಳಿಗಳ ಅಭಿವೃದ್ಧಿ ಉಪಯೋಜನೆ ಹಾಗೂ ಸೆಮಿನಾರ್‌ಗಳು. | ಅನುಮೋದಿಸಬಹುದು. | ಅನುಮೋದಿಸಿದೆ |

K. S.V
(ಕಲಾವತಿ ಎಸ್.ವಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ<br>Scheme & HOA | ನಿಗದಿಪಡಿಸಿದ ಅನುದಾನ Outlay<br>SCSP | TSP | Grand Total SCSP + TSP | ಯೋಜನೆ / ಕಾರ್ಯಕ್ರಮದ ವಿವರ<br>Scheme / Programme Details<br>ಇಲಾಖೆಯ ಪ್ರಸ್ತಾವನೆಗಳು | ನೋಡಲ್ ಏಜೆನ್ಸಿ ಶಿಫಾರಸ್ಸು<br>Recommendations of Nodal Agency | ರಾಜ್ಯ ಪ.ಜಾತಿ / ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯ<br>Decision of the State SC/ST Development Council |
|---|---|---|---|---|---|---|---|
| 7. | ಕೇ.ಪು.ಯೋ ಕೇಂದ್ರದ ಪಾಲು-(100% ಕೇಂದ್ರ) ಮೇವು ಮತ್ತು ಆಹಾರ ಅಭಿವೃದ್ಧಿ ಉಪ ಯೋಜನೆ (ರಾ.ಜಾ.ಮಿ)CSS Central Share 100% GoI) Sub Mission on Feed and Fodder Development(NLM)<br>2403-00-107-0-03 | 1.69 | 0.68 | 2.37 | ಮೇವಿನ ಬೀಜದ ಉತ್ಪಾದನೆ ಮತ್ತು ಸರಬರಾಜು ಮಾಡಲು EOI ಮೂಲಕ ಸಂಸ್ಥೆಯನ್ನು ಗುರುತಿಸಲಾಗಿದ್ದು, ಉತ್ಪಾದಿಸಲಾದ ಬೀಜಗಳನ್ನು ಮೇವಿನ ಬೀಜದ ಕಿರು ಪೊಟ್ಟಣಗಳನ್ನು ರೈತರಿಗೆ ವಿತರಿಸಲಾಗುವುದು. | ಅನುಮೋದಿಸಬಹುದು. | ಅನುಮೋದಿಸಿದೆ |
| 8. | ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆ, ಬೀದರ್<br>Establishment of Veterinary and Animal Sciences University, Bidar<br>2403-00-113-0-06 | 0.26 | 0.10 | 0.36 | ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಒದಗಿಸಲು, ಲ್ಯಾಪ್‌ಟಾಪ್‌ಗಳನ್ನು, practical kit ಗಳನ್ನು ನೀಡಲು, ರಾಜ್ಯ ಮತ್ತು ಅಂತರ ರಾಜ್ಯ ಶೈಕ್ಷಣಿಕ ಪ್ರವಾಸ ಭತ್ಯೆಗಳಿಗೆ Scholarship ಹಾಗೂ ಹೆಚ್ಚಿನ ಅಂಕಗಳೊಂದಿಗೆ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ ನೀಡಲು ಮತ್ತು 50% ಫೀ ಮರುಪಾವತಿಗಾಗಿ ಉಪಯೋಗಿಸಲಾಗುವುದು. | ಈ ಕೆಳಕಂಡ ಕಾರ್ಯಕ್ರಮಗಳಿಗೆ ಅನುದಾನ ಉಪಯೋಗಿಸುವುದು.<br>1) ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚದ ವ್ಯತ್ಯಾಸವನ್ನು ಭರಿಸುವುದು<br>2) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಮಾಸಿಕ ರೂ. 10,000/- ಶಿಷ್ಯ ವೇತನ ನೀಡುವುದು.<br>3) ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷದಿಂದ ರೂ. 10.00 ಲಕ್ಷದ ಮಿತಿಯೊಳಗಿರುವ ವಿದ್ಯಾರ್ಥಿಗಳಿಗೆ 50% ಶುಲ್ಕ ಮರುಪಾವತಿ. | ಅನುಮೋದಿಸಿದೆ |

S.V

(ಕಲಾವತಿ ಎಸ್.ವಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ Scheme & HOA | ನಿಗದಿಪಡಿಸಿದ ಅನುದಾನ Outlay SCSP | TSP | Grand Total SCSP + TSP | ಯೋಜನೆ / ಕಾರ್ಯಕ್ರಮದ ವಿವರ Scheme / Programme Details ಇಲಾಖೆಯ ಪ್ರಸ್ತಾವನೆಗಳು | ನೋಡಲ್ ಏಜೆನ್ಸಿ ಶಿಫಾರಸ್ಸು Recommendations of Nodal Agency | ರಾಜ್ಯ ಪ.ಜಾತಿ / ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯ Decision of the State SC/ST Development Council |
|---|---|---|---|---|---|---|---|
| | | | | | | 4) ವಾರ್ಷಿಕ ಆದಾಯ ಮಿತಿ ರೂ. 5.00 ಲಕ್ಷದ ಒಳಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ / ರೆಫರೆನ್ಸ್ ಪುಸ್ತಕಗಳನ್ನು ಒದಗಿಸುವುದು. | |
| 9. | ಹಾಲು ಉತ್ಪಾದಕರಿಗೆ ಉತ್ತೇಜನ<br>Incentive to Milk Producers<br>(S.S)<br>2404-00-191-1-17 | 70.07 | 40.04 | 110.10 | ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ರೂ.5/- ಪ್ರೋತ್ಸಾಹಧನ. | ಅನುಮೋದಿಸಬಹುದು.<br>ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಹೈನುಗಾರಿಕೆಗೆ ಸಹಾಯಧನ.<br>ಅನುದಾನ ಉಳಿಕೆಯಾದಲ್ಲಿ ಹಸು, ಎಮ್ಮೆ ಖರೀದಿಗೆ ಸಹಾಯಧನ ನೀಡುವುದು. | ಅನುಮೋದಿಸಿದೆ |
| 10. | ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ<br>Unspent SCSP-TSP Amount as per the SCSP-TSP Act 2013<br>2403-00-001-0-04 | 0.28 | 4.05 | 4.33 | 1. ಕೋಳಿ ಮರಿಗಳನ್ನು ಉತ್ಪಾದಿಸಿ, ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ & ಪ.ಪಂಗಡದ ರೈತ ಮಹಿಳೆಯರಿಗೆ ಉಚಿತವಾಗಿ ವಿತರಿಸಿ, ಅವರ ಆದಾಯ ಹೆಚ್ಚಿಸುವ ಕಾರ್ಯಕ್ರಮ (ಪ.ಜಾತಿಯ - 675 ಘಟಕಗಳು & ಪ.ಪಂಗಡದ 7692 ಪ್ರತಿ ಘಟಕದಲ್ಲಿ 20 ಕೋಳಿ ಮರಿಗಳು)<br>2. ಪರಿಶಿಷ್ಟ ಜಾತಿ/ಪ.ಪಂಗಡದ ಫಲಾನುಭವಿಗಳಿಗೆ ಕೋಳಿ ಮಾಂಸ ಮತ್ತು ಮೊಟ್ಟೆ ಮಾರಾಟ ಮಳಿಗೆಯನ್ನು ಶೇಕಡಾ 90% ರಷ್ಟು ಸಹಾಯಧನದಲ್ಲಿ ನೀಡುವುದು -ಪ.ಜಾತಿಯ-2 ಘಟಕಗಳು & ಪ.ಪಂಗಡದ - 45 ಘಟಕಗಳು (ಪ್ರತಿ ಘಟಕಕ್ಕೆ ರೂ.5 ಲಕ್ಷದಂತೆ) | 1. ಕ್ರ.ಸಂ.01 ರ ಕಾರ್ಯಕ್ರಮಕ್ಕೆ ಹೆಚ್ಚಿನ ಬೇಡಿಕೆ ಇರುವುದರಿಂದ ಸದರಿ ಕಾರ್ಯಕ್ರಮವನ್ನು ಮಾತ್ರ ಅನುಮೋದಿಸಲಾಗಿದೆ.<br>2. ಟಿ.ಎಸ್.ಪಿ ಅಡಿ ಹೆಚ್ಚಿನ ಅನುದಾನ ಲಭ್ಯವಿರುವುದರಿಂದ ಕೋಳಿ ಘಟಕದ ಜೊತೆಗೆ ಕುರಿ ಘಟಕಕ್ಕೂ ಸಹಾಯಧನ ನೀಡುವುದು.<br>3. ಕ್ರ.ಸಂ 02 ರ ಕಾರ್ಯಕ್ರಮವನ್ನು ಅನುಮೋದಿಸಿರುವುದಿಲ್ಲ. | ಅನುಮೋದಿಸಿದೆ |

(ಕಲಾವತಿ ಎಸ್.ವಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ Scheme & HOA | ನಿಗದಿಪಡಿಸಿದ ಅನುದಾನ Outlay SCSP | TSP | Grand Total SCSP + TSP | ಯೋಜನೆ / ಕಾರ್ಯಕ್ರಮದ ವಿವರ Scheme / Programme Details ಇಲಾಖೆಯ ಪ್ರಸ್ತಾವನೆಗಳು | ನೋಡಲ್ ಏಜೆನ್ಸಿ ಶಿಫಾರಸ್ಸು Recommendations of Nodal Agency | ರಾಜ್ಯ ಪ.ಜಾತಿ / ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯ Decision of the State SC/ST Development Council |
|---|---|---|---|---|---|---|---|
| 11 | ಕೇ.ಪು.ಯೋ-ಕೇಂದ್ರದ ಪಾಲು-ಆಸ್ಕಾಡ್ ಪರಿಹಾರ ಧನ ಪಾವತಿ CSS-Central Share-ASCAD Payment of compensation 2403 00-101-0-43 | 0.17 | 0.07 | 0.24 | ಹಂದಿ ಜ್ವರ ರೋಗೋದ್ರೇಕದಿಂದ ಮರಣ ಹೊಂದಿದ ಹಂದಿಗಳು ನಾಶಪಡಿಸಲಾಗುವ ಹಂದಿಗಳ ಆಹಾರ. ಹಕ್ಕಿ ಜ್ವರ ರೋಗೋದ್ರೇಕದಿಂದ ನಾಶಪಡಿಸಲಾಗುವ ಕೋಳಿಗಳು ಮತ್ತು ಕೋಳಿಗಳ ಆಹಾರಗಳ ಪರಿಹಾರ ಮೊತ್ತವನ್ನು ಮಾಲೀಕರಿಗೆ ವಿತರಿಸಲು. | ಅನುಮೋದಿಸಬಹುದು | |
| 12 | ಕೇ.ಪು.ಯೋ ರಾಜ್ಯದ ಪಾಲು-ಆಸ್ಕಾಡ್ ಪರಿಹಾರ ಧನ ಪಾವತಿ CSS- State Share ASCAD Payment of compensation 2403-00-101-0 44 | 0.17 | 0.07 | 0.24 | | | |
| 13 | ಕೇ.ಪು.ಯೋ ಕೇಂದ್ರದ ಪಾಲು-100% ಕೇಂದ್ರ-ಆಸ್ಕಾಡ್ ತರಬೇತಿ ಮತ್ತು ಅರಿವು ಕಾರ್ಯಕ್ರಮ CSS-Central Share 100% GoI - ASCAD Training and wareness 2403-00 101-0-45 | 0.15 | 0.06 | 0.21 | ತಾಂತ್ರಿಕ ಮತ್ತು ಅರೆ ತಾಂತ್ರಿಕ ಸಿಬ್ಬಂದಿಗಳಿಗೆ ತರಬೇತಿ ಹಾಗೂ ವಿಭಾಗ ಮಟ್ಟದಲ್ಲಿ ಕಾರ್ಯಾಗಾರ ಇತ್ಯಾದಿಗಳಿಗೆ | ಆದರೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯ್ದೆ ಮತ್ತು ಕಾರ್ಯಕ್ರಮಗಳ ಬಗ್ಗೆ ಎಲ್ಲಾ ಜಿಲ್ಲೆಗಳಲ್ಲಿ ಕ್ಷೇತ್ರಾಧಿಕಾರಿಗಳಿಗೆ ತರಬೇತಿ ನೀಡುವುದು | ಅನುಮೋದಿಸಿದೆ |
| 14 | ಕೇ.ಪು.ಯೋ ಕೇಂದ್ರದ ಪಾಲು-(ಇ.ಎಸ್.ವಿ.ಹೆಚ್.ಡಿ) ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳು CSS-Central Share-(ESVHD) Mobile Veterinary Units 2403-00-101 0 46 | 2.78 | 1.13 | 3.90 | 275 ಸಂಖ್ಯೆಯ ಸಂಚಾರಿ ಪಶುಚಿಕಿತ್ಸಾ ವಾಹನ ಘಟಕಗಳ ನಿರ್ವಹಣೆ, ತುರ್ತು ಔಷಧಿ, ಇಂಧನ, ಕಾಲ್ ಸೆಂಟರ್ ನಿರ್ವಹಣೆ, ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಪಶುವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳ ವೇತನ | ವೇತನ ಪಾವತಿ ಹೊರತುಪಡಿಸಿ ಉಳಿದ ಅಂಶಗಳನ್ನು ಅನುಮೋದಿಸಬಹುದು | ಅನುಮೋದಿಸಿದೆ |
| 15 | ಕೇ.ಪು.ಯೋ-ರಾಜ್ಯದ ಪಾಲು (ಇ.ಎಸ್.ವಿ.ಹೆಚ್.ಡಿ) ಸಂಚಾರಿ ಪಶು ಚಿಕಿತ್ಸಾ ಘಟಕ | 1.85 | 0.75 | 2.60 | | | |

(ಕಲಾವತಿ ಎಸ್.ವಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

| ಕ್ರ. ಸಂ | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ Scheme & HOA | ನಿಗದಿಪಡಿಸಿದ ಅನುದಾನ Outlay SCSP | TSP | Grand Total SCSP + TSP | ಯೋಜನೆ / ಕಾರ್ಯಕ್ರಮದ ವಿವರ Scheme / Programme Details ಇಲಾಖೆಯ ಪ್ರಸ್ತಾವನೆಗಳು | ನೋಡಲ್ ಏಜೆನ್ಸಿ ಶಿಫಾರಸ್ಸು Recommendations of Nodal Agency | ರಾಜ್ಯ ಪ.ಜಾತಿ / ಪ.ಪಂಗಡ ಅಭಿವೃದ್ಧಿ ಪರಿಷತ್ತಿನ ನಿರ್ಣಯ Decision of the State SC/ST Development Council |
|---|---|---|---|---|---|---|---|
| | ವಾಹನಗಳು CSS State Share-(ESVHD) Mobile Veterinary Units 2403-00-101-0-47 | | | | | | |
| 16 | ಕೇ.ಪ್ರ.ಯೋ. ರಾಜ್ಯದ ಪಾಲು-ಜಾನುವಾರು ವಿಮೆ (ರಾ.ಜಾ.ವಿ) CSS State Share Livestock Insurance(NLM) 2403-00-108-0-02 | 0.23 | 0.09 | 0.32 | ಕೇಂದ್ರದ ಪಾಲು ಶೇ.60 ಮತ್ತು ರಾಜ್ಯದ ಪಾಲು ಶೇ.40ರ ದರದಲ್ಲಿ ಅಂದಾಜು 34.650 ರಾಸುಗಳನ್ನು ವಿಮೆಗೆ ಒಳಪಡಿಸಲಾಗುವುದು. ಕೇಂದ್ರ ಸರ್ಕಾರ ನಿಗದಿಪಡಿಸಿದ ದರದಲ್ಲಿ ಪ್ರೀಮಿಯಂ ಸಹಾಯಧನವನ್ನು ರೈತರ ಜಾನುವಾರುಗಳನ್ನು ವಿಮೆ ಮಾಡಿರುವ ಸಂದರ್ಭದಲ್ಲಿ ಉಪಯೋಗಿಸಲಾಗುವುದು. ರೋಗ ಮತ್ತು ಇತರೆ ಕಾರಣಗಳಿಂದ ರಾಸುಗಳು ಮರಣ ಹೊಂದಿದ ಸಂದರ್ಭದಲ್ಲಿ ವಿಮಾ ಮೊತ್ತವನ್ನು ರೈತರಿಗೆ ಪಾವತಿಸಲಾಗುವುದು. | ಅನುಮೋದಿಸಬಹುದು | ಅನುಮೋದಿಸಿದ |
| 17. | ಕೇ.ಪ್ರ.ಯೋ. ಕೇಂದ್ರದ ಪಾಲು ಜಾನುವಾರು ವಿಮೆ (ರಾ.ಜಾ.ವಿ) CSS Central Share Livestock Insurance(NLM) 2403-00-108-0-01 | 0.34 | 0.14 | 0.48 | | | |
| 18. | ಕೇ.ಪ್ರ.ಯೋ-ಕೇಂದ್ರದ ಪಾಲು (100%) ತರಬೇತಿ CSS-Central Share-(100% GoI) -NLM - Traning 2403-00-109-0-05 | 0.21 | 0.09 | 0.30 | ರೈತರಿಗೆ, ಅಧಿಕಾರಿಗಳಿಗೆ ಹಾಗೂ ಅರೆ ತಾಂತ್ರಿಕ ಸಿಬ್ಬಂದಿಗಳಿಗೆ ಎಲ್ಲಾ ಜಿಲ್ಲೆಗಳಲ್ಲಿಯೂ ತರಬೇತಿಗೆ ಬೇಕಾದ ಪೂರೈಕೆ ಮತ್ತು ತರಬೇತಿ ಕೇಂದ್ರಗಳ ನಿರ್ವಹಣೆ | ಅನುಮೋದಿಸಬಹುದು. ಕೋಳಿ ಸಾಕಾಣಿಕೆ, ಹೈನುಗಾರಿಕೆ ಮತ್ತು ಕುರಿ & ಹಂದಿ ಸಾಕಾಣಿಕೆ ಬಗ್ಗೆ ರೈತರಿಗೆ ತರಬೇತಿ ನೀಡುವುದು. | ಅನುಮೋದಿಸಿದ |
| | TOTAL | **88.30** | **51.39** | **139.69** | | | |

(ಕಲಾವತಿ ಎಸ್.ವಿ)
ಸರ್ಕಾರದ ಜಂಟಿ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ